ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ
ಮಾಚೇನಹಳ್ಳಿ ನಿದಿಗೆ ಅಂಚೆ ಶಿವಮೊಗ್ಗ – 577 222. ದೂರವಾಣಿ : 246161, 246165.
ದೂರವಾಣಿ ಸಂಖ್ಯೆ:08182-246165 E-Mail:shimulpandi@gmail.com Fax:08182-246284.

# ತಾಂತ್ರಿಕ ಟೆಂಡರ್ ಭಾಗ –1

**ಟೆಂಡರ್‌ದಾರರು ತಾಂತ್ರಿಕ ಟೆಂಡರ್ ಮತ್ತು ವಾಣಿಜ್ಯ ಟೆಂಡರ್ ದಾಖಲಾತಿಗಳನ್ನು ಮತ್ತು ಇ.ಎಂ.ಡಿ. ಮೊತ್ತದೊಂದಿಗೆ ನಿಗದಿತ ಶುಲ್ಕ ಪಾವತಿಸಿ ಕರ್ನಾಟಕ ಸರ್ಕಾರದ ಇ–ಪೋರ್ಟಲ್ ಮುಖಾಂತರವೇ ಅಪ್‌ಲೋಡ್ ಮಾಡತಕ್ಕದ್ದು.**

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ**
**ಮಾಚೇನಹಳ್ಳಿ ನಿದಿಗೆ ಅಂಚೆ ಶಿವಮೊಗ್ಗ – 577 222. ದೂರವಾಣಿ : 246161, 246165.**

## ತಾಂತ್ರಿಕ ಟೆಂಡರ್

### ವಾರ್ಷಿಕ ದರ ಗುತ್ತಿಗೆ

ಕಹಾಮ ಪಶುಆಹಾರ ಕಾರ್ಖಾನೆ ಸಂಡಾ, ಶಿಕಾರಿಪುರ ಶಿವಮೊಗ್ಗ ಜಿಲ್ಲೆ ಅಥವಾ ಕಹಾಮ ಪಶುಆಹಾರ ಕಾರ್ಖಾನೆ ಗುಬ್ಬಿ, ತುಮಕೂರು ಜಿಲ್ಲೆಯಿಂದ (ಪಶುಆಹಾರ ಲಭ್ಯವಿರುವ ಕಾರ್ಖಾನೆಯಿಂದ ಮಾತ್ರ) ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯ **ಚಿತ್ರದುರ್ಗ ಜಿಲ್ಲೆಯ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ, ಬಿ.ಎಂ.ಸಿ. ಕೇಂದ್ರಗಳಿಗೆ ಮತ್ತು ಶೀತಲೀಕರಣ ಕೇಂದ್ರಗಳ ಉಗ್ರಾಣಗಳಿಗೆ** ಪಶುಆಹಾರ, ಮಿನರಲ್ ಮಿಕ್ಚರ್, ಯೂರಿಯ ನೆಕ್ಕುಬಿಲ್ಲೆ, ಕರುಗಳ ಪಶುಆಹಾರವನ್ನು ಸಾಗಾಣಿಕೆ ಮಾಡಲು 2010 ರ ಅಥವಾ ನಂತರದ ಸಾಲಿನ ಸುಸ್ಥಿತಿಯಲ್ಲಿರುವ 10/16 ಟನ್ ಮತ್ತು ಅದಕ್ಕಿಂತ ಹೆಚ್ಚಿನ ಸಾಮರ್ಥ್ಯದ 4 ಸರಕು ಸಾಗಾಣಿಕೆ ವಾಹನಗಳನ್ನು ಹೊಂದಿರುವವರು ಮಾತ್ರ **ಒಂದು ವರ್ಷದ ಅವಧಿಗೆ ಗುತ್ತಿಗೆ** ಆಧಾರದಲ್ಲಿ ಒದಗಿಸಲು ತಾಂತ್ರಿಕ ಟೆಂಡರ್.

### ತಾಂತ್ರಿಕ ಟೆಂಡರ್ ಭಾಗ—1

| | | |
|---|---|---|
| 1 | **ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ** | **01.04.2022ರಿಂದ** |
| 2 | ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ | **18.04.2022ರಂದು ಸಂಜೆ: 17.30 ಗಂಟೆಯವರೆಗೆ** |
| 3 | **ಟೆಕ್ನಿಕಲ್ ಟೆಂಡರ್ ತೆರೆಯುವ ದಿನ** | **20.04.2022** ರಂದು ಬೆಳಿಗ್ಗೆ: **11.30** ಗಂಟೆಗೆ |
| 4 | **ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ ದಿನ** | **25.04.2022** ರಂದು ಬೆಳಿಗ್ಗೆ: **11.30** ಗಂಟೆಗೆ |

ಟೆಂಡರ್‌ದಾರರ ಸಹಿ ಮತ್ತು ಹೆಸರು
(ದಪ್ಪ ಅಕ್ಷರಗಳಲ್ಲಿ)

# ಅನುಬಂಧ "ಎ"

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ**
**ಮಾಚೇನಹಳ್ಳಿ ನಿದಿಗೆ ಅಂಚೆ ಶಿವಮೊಗ್ಗ – 577 222. ದೂರವಾಣಿ : 246161, 246165.**

---

ಐ.ಎಫ್.ಟಿ/ಸಂಖ್ಯೆ/ಶಿದಾಚಿಸಹಾಒ/ಶೇಮತಾಂ/ಪ.ಆ/9660/2021–22 **ದಿನಾಂಕ: 29.03.2022**

**–: <u>ಪಶು ಆಹಾರ ಸಾಗಾಣಿಕೆ ಮಾಡಲು ಸರಕು ಸಾಗಾಣಿಕೆ ವಾಹನಗಳನ್ನು ಒಂದು ವರ್ಷದ ಅವಧಿಗೆ ಒದಗಿಸಲು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ</u> :–**

ಅ) ಚಿತ್ರದುರ್ಗ ಜಿಲ್ಲೆಯ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ, ಚಿತ್ರದುರ್ಗ ಡೈರಿ ಉಗ್ರಾಣಕ್ಕೆ, ಶೀತಲೀಕರಣ ಕೇಂದ್ರಗಳ ಉಗ್ರಾಣಗಳಿಗೆ ಮತ್ತು ಬಿ.ಎಂ.ಸಿ. ಕೇಂದ್ರಗಳಿಗೆ ಕಹಾಮ ಪಶುಆಹಾರ ಕಾರ್ಖಾನೆ ಸಂಡಾ ಶಿಕಾರಿಪುರ ಶಿವಮೊಗ್ಗ ಜಿಲ್ಲೆ ಅಥವಾ ಪಶುಆಹಾರ ಕಾರ್ಖಾನೆ ಗುಬ್ಬಿ, ತುಮಕೂರು ಜಿಲ್ಲೆಯಿಂದ (ಪಶುಆಹಾರ ಲಭ್ಯವಿರುವ ಕಾರ್ಖಾನೆಯಿಂದ ಮಾತ್ರ) ಪಶುಆಹಾರ, ಮಿನರಲ್ ಮಿಕ್ಚರ್, ಯೂರಿಯಾ ನೆಕ್ಕುಬಿಲ್ಲೆ ಮತ್ತು ಕರುಗಳ ಪಶುಆಹಾರ ಸಾಗಾಣಿಕೆ ಮಾಡಲು, 10/16 ಟನ್ ಮತ್ತು ಅದಕ್ಕಿಂತ ಹೆಚ್ಚಿನ ಸಾಮರ್ಥ್ಯದ 4 ಸುಸ್ಥಿತಿಯಲ್ಲಿರುವ ಸರಕು ಸಾಗಾಣಿಕೆ ವಾಹನಗಳನ್ನು ಹೊಂದಿರುವವರು ಮಾತ್ರ **<u>ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದಲ್ಲಿ ಒದಗಿಸಲು ತಾಂತ್ರಿಕ ಟೆಂಡರ್.</u>**

ಟೆಂಡರ್‌ದಾರರ ಸಹಿ ಮತ್ತು ಹೆಸರು
(ದಪ್ಪ ಅಕ್ಷರಗಳಲ್ಲಿ)

**ನಿಬಂಧನೆಗಳು :**

1. ಟೆಕ್ನಿಕಲ್ /ಕಮರ್ಷಿಯಲ್ ಟೆಂಡರ್‌ನ್ನು ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಡಿ ಸಲ್ಲಿಸುವುದು.

2. ಸಲ್ಲಿಸಲ್ಪಟ್ಟ ಟೆಂಡರ್‌ಗಳಲ್ಲಿ ಟೆಕ್ನಿಕಲ್ ಟೆಂಡರ್‌ನ್ನು **ದಿ: 20.04.2022** ರಂದು ಬೆಳಿಗ್ಗೆ 11.30 ಘಂಟೆಗೆ ತೆರೆಯಲಾಗುವುದು.

3. 2010 ರ ಅಥವಾ ನಂತರದ ಸಾಲಿನ **10/16 ಟನ್ ಅಥವಾ ಹೆಚ್ಚಿನ ಸಾಮರ್ಥ್ಯವುಳ್ಳ ಕನಿಷ್ಠ 4 ಸುಸ್ಥಿತಿಯಲ್ಲಿರುವ ವಾಹನವುಳ್ಳವರು ಕನಿಷ್ಠ ರೂ. 2,00,000/– ಇ.ಎಂ.ಡಿ. ಪಾವತಿಸಿ ಪಶುಆಹಾರ ಸಾಗಾಣಿಕೆ ಮಾರ್ಗಕ್ಕೆ ಟೆಂಡರ್ ಸಲ್ಲಿಸಬಹುದು.**

4. ಟೆಂಡರ್ ಸಲ್ಲಿಸಬಯಸುವವರು ತಮ್ಮ ಹೆಸರಿಗೆ 10/16 ಟನ್ ಮತ್ತು ಅದಕ್ಕಿಂತ ಹೆಚ್ಚಿನ ಸಾಮರ್ಥ್ಯವುಳ್ಳ **2010 ರ** ಅಥವಾ ನಂತರದ ಮಾದರಿಯ ಕನಿಷ್ಠ 4 ಸಂಖ್ಯೆ ಸ್ವಂತ ವಾಹನಗಳನ್ನು ಹೊಂದಿರಬೇಕು. ಮತ್ತು ಟೆಂಡರ್ ತೆರೆಯುವ ಸಮಯದಲ್ಲಿ, ಪರಿಶೀಲನೆಗಾಗಿ ಟೆಂಡರ್‌ನಲ್ಲಿ ಪ್ರಕಟಿಸಿರುವ ಮಾದರಿಯ/ಸಾಮರ್ಥ್ಯದ ವಾಹನಕ್ಕೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅಪ್‌ಲೋಡ್ ಮಾಡತಕ್ಕದ್ದು.

5. ಟೆಂಡರ್‌ನಲ್ಲಿ ಸಮ ದರ ನಮೂದಿಸಿರುವುದು ಕಂಡುಬಂದಲ್ಲಿ ಆಸಕ್ತ ಟೆಂಡರ್‌ದಾರರೊಂದಿಗೆ ಪುನಃ ದರ ಸಂಧಾನ ಮಾಡಿ, ದರ ಸಂಧಾನದಲ್ಲಿ ಕಡಿಮೆ ದರ ನಮೂದಿಸುವ ಸಾಗಾಣಿಕೆ ಟೆಂಡರ್‌ದಾರರಿಗೆ ಮಾತ್ರ ಪಶುಆಹಾರ ಸಾಗಾಣಿಕೆ ಟೆಂಡರ್ ನೀಡಲಾಗುವುದು.

ಪ್ರತಿ ಮಾರ್ಗಕ್ಕೆ ನೀಡಬೇಕಾದ ಇ.ಎಂ.ಡಿ / ಭದ್ರತಾ ಠೇವಣಿ ಮತ್ತು ಮಾರ್ಗಗಳ ವಿವರ ಮತ್ತು ಇತರೆ ನಿಬಂಧನೆಗಳ ವಿವರವಾದ ಷೆಡ್ಯೂಲ್‌ನ್ನು ಹಾಗೂ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ವಿವರವಾದ ಮಾಹಿತಿಯು ಟೆಂಡರ್ ಫಾರಂನಲ್ಲಿ ಲಭ್ಯವಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಶಿವಮೊಗ್ಗ ಹಾಲು ಒಕ್ಕೂಟದ ಕಛೇರಿ ವೇಳೆಯಲ್ಲಿ/ ಶೇಖರಣೆ ಮತ್ತು ತಾಂತ್ರಿಕ ವಿಭಾಗದಿಂದ ಪಡೆಯಬಹುದು. **ಮೊಬೈಲ್ : 7760971922**

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ
ಜಿಲ್ಲಾ ಸಹಕಾರ ಹಾಲು ಒಕ್ಕೂಟ
ಶಿವಮೊಗ್ಗ.

ದಿನಾಂಕ : **29.03.2022**
ಸ್ಥಳ : ಶಿವಮೊಗ್ಗ ಡೇರಿ

# ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ಅರ್ಜಿ

**ಇವರಿಗೆ :**

**ವ್ಯವಸ್ಥಾಪಕ ನಿರ್ದೇಶಕರು**
**ಶಿವಮೊಗ್ಗ ಹಾಲು ಒಕ್ಕೂಟ**
**ಮಾಚೇನಹಳ್ಳಿ ನಿದಿಗೆ ಅಂಚೆ**
**ಶಿವಮೊಗ್ಗ – 577 222.**

**ಇಂದ**

**ಹೆಸರು : ................................**
**ತಂದೆಯ ಹೆಸರು :....................**
**ವಿಳಾಸ..................................**
**..........................................**
**ಪಿನ್ ಕೋಡ್ :........................**
**ಮೊಬೈಲ್ ನಂ :**
ದೂರವಾಣಿ ಸಂ:

ಸ್ವಾಮಿ,

**ವಿಷಯ :** ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್‌ನ ವಾರ್ಷಿಕ ದರ ಗುತ್ತಿಗೆ ಪಡೆಯುವ ಸಲುವಾಗಿ.

ಕಹಾಮ ಪಶುಆಹಾರ ಕಾರ್ಖಾನೆ ಸಂಡಾ ಶಿಕಾರಿಪುರ ಶಿವಮೊಗ್ಗ ಜಿಲ್ಲೆ ಅಥವಾ ಕಹಾಮ ಪಶುಆಹಾರ ಕಾರ್ಖಾನೆ ಗುಬ್ಬಿ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ ಇಲ್ಲಿಂದ ಶಿವಮೊಗ್ಗ ಹಾಲು ಒಕ್ಕೂಟದ ವ್ಯಾಪ್ತಿಯ ಚಿತ್ರದುರ್ಗ ಜಿಲ್ಲೆಯ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ, ಡೈರಿ ಉಗ್ರಾಣಗಳಿಗೆ, ಶೀತಲೀಕರಣ ಕೇಂದ್ರಗಳಿಗೆ ಮತ್ತು ಬಿ.ಎಂ.ಸಿ. ಕೇಂದ್ರಗಳಿಗೆ ಪಶುಆಹಾರ, ಮಿನರಲ್ ಮಿಕ್ಚರ್, ಯೂರಿಯಾ ನೆಕ್ಕುಬಿಲ್ಲೆ ಮತ್ತು ಕರುಗಳ ಪಶುಹಾರವನ್ನು ಸಾಗಾಣಿಕೆ ಮಾಡಲು, ವಿವಿಧ ಸಾಮರ್ಥ್ಯದ ಸರಕು ಸಾಗಾಣಿಕೆ 10/16 ಟನ್ ಹಾಗೂ ಹೆಚ್ಚಿನ ಸಾಮರ್ಥ್ಯದ 2010 ರ ಅಥವಾ ನಂತರದ ಮಾದರಿಯ ವಾಹನಗಳನ್ನು ಹೊಂದಿದ್ದು, ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್‌ನ ವಾರ್ಷಿಕ ಗುತ್ತಿಗೆ ಹಾಗೂ ತಾಂತ್ರಿಕ ಟೆಂಡರ್ ಭಾಗ –1 ರ ಅರ್ಹತೆ ಪಡೆಯುವ ಸಲುವಾಗಿ ಅರ್ಜಿ ಸಲ್ಲಿಸುತ್ತಿರುವ ಬಗ್ಗೆ ನನ್ನ ದರ ನಮೂದಿಸಿ ಅಗತ್ಯವಿರುವ ಎಲ್ಲಾ ಮಾಹಿತಿ ಮತ್ತು ದಾಖಲೆಗಳನ್ನು ಈ ಕೆಳಕಂಡಂತೆ ಸಲ್ಲಿಸುತ್ತಿದ್ದೇನೆ.

ಶ್ರೀ/ಶ್ರೀಮತಿ................................................. ಆದ ನಾನು / ನನ್ನ ಪರವಾಗಿ ಪಶುಆಹಾರ ಸಾಗಾಣಿಕೆ **ಚಿತ್ರದುರ್ಗ ವಿಭಾಗದ** ಮಾರ್ಗಕ್ಕೆ ತಕ್ಕ ಸಾಮರ್ಥ್ಯದ ವಾಹನಗಳನ್ನು ಹೊಂದಿದ್ದು, ದೃಢೀಕೃತ ದಾಖಲೆಗಳೊಂದಿಗೆ ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್‌ನ ಕಾನೂನಿಗೆ ಒಳಪಟ್ಟು, ಟೆಂಡರ್‌ನಲ್ಲಿ ಭಾಗವಹಿಸಲು ದಾಖಲೆಗಳನ್ನು ಲಗತ್ತಿಸಿರುತ್ತೇನೆ.

ನಾನು/ನಾವು ಟೆಂಡರ್ ಪ್ರಕಟಣೆಯಲ್ಲಿ ತಿಳಿಸಿರುವ ಸೂಚನೆಗಳು ನಿಯಮ ಮತ್ತು ನಿಬಂಧನೆಗೊಳಪಟ್ಟು ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ಗುತ್ತಿಗೆಯಲ್ಲಿ ಭಾಗವಹಿಸುತ್ತಿದ್ದೇನೆ. ನನಗೆ ಟೆಂಡರ್ ಒಪ್ಪಿಗೆಯಾದಲ್ಲಿ ಟೆಂಡರ್ ಪ್ರಕಟಣೆಯಲ್ಲಿ ಪ್ರಕಟಿಸಿರುವ ಸಾಮರ್ಥ್ಯದ ಮತ್ತು ಮಾದರಿಯ ವಾಹನ ಒದಗಿಸಲು ಬದ್ಧನಾಗಿರುತ್ತೇನೆ. ನನಗೆ ತಿಳಿದ ಮಟ್ಟಿಗೆ ಟೆಂಡರ್ ಸಮಿತಿಯು ಅರ್ಜಿಯನ್ನು ಯಾವುದೇ ಸೂಚನೆ ನೀಡದೆ ಅಂಗೀಕರಿಸುವ ಮತ್ತು ತಿರಸ್ಕರಿಸುವ ಸಂಪೂರ್ಣ ಅಧಿಕಾರವನ್ನು ಹೊಂದಿರುತ್ತದೆ.

ವಾಣಿಜ್ಯ ಟೆಂಡರ್ ಭಾಗ–2ನ್ನು ತೆರೆದ ದಿನದಿಂದ 60 ದಿನಗಳ ಕಾಲ ನನ್ನ ಟೆಂಡರ್ / ದರ ನೀಡಿಕೆ ಊರ್ಜಿತಾವಸ್ಥೆಯಲ್ಲಿಡಲು ಒಪ್ಪಿರುತ್ತೇನೆ.

**ಟೆಂಡರ್‌ದಾರರ ಸಹಿ ಮತ್ತು ಹೆಸರು**
(ದಪ್ಪ ಅಕ್ಷರಗಳಲ್ಲಿ)

# ಅನುಬಂಧ – ಬಿ

## ದರಪಟ್ಟಿ ಸಲ್ಲಿಸಲು ನಿಯಮ ನಿಬಂಧನೆಗಳು

### 1.0 ಸಾಗಾಣಿಕೆ ಗುತ್ತಿಗೆ ವ್ಯಾಪ್ತಿ :

1.1 ಪಶುಆಹಾರ ವಿತರಣಾ/ಸಾಗಾಣಿಕೆ ಮಾರ್ಗಗಳಿಗೆ ಸರಕು ಸಾಗಾಣಿಕೆ ವಾಹನಗಳನ್ನು ಒದಗಿಸುವುದಾಗಿ ಸಾರಿಗೆ ಗುತ್ತಿಗೆ ಪಡೆಯುವ ಸರಕು ಸಾಗಾಣಿಕೆ ವಾಹನಗಳ ಗುತ್ತಿಗೆದಾರರು ಒಕ್ಕೂಟದಿಂದ ನೀಡುವ ಸಂಘಗಳ ಬೇಡಿಕೆ ಮತ್ತು ವೇಳಾಪಟ್ಟಿಯಂತೆ ಶಿಕಾರಿಪುರ ಪಶುಆಹಾರ ಕಾರ್ಖಾನೆ ಸಂಡಾ ಶಿವಮೊಗ್ಗ ಜಿಲ್ಲೆ ಅಥವಾ ಕಹಾಮ ಪಶುಆಹಾರ ಕಾರ್ಖಾನೆ ಗುಬ್ಬಿ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ ಇಲ್ಲಿಂದ ಪಶುಆಹಾರವನ್ನು ಪಡೆದು ಲಾರಿಗೆ ಏರಿಸಿಕೊಂಡು ಮಳೆಗಾಳಿ/ವಾತಾವರಣ ವೈಪರಿತ್ಯದಿಂದ ಹಾಳಾಗದಂತೆ ಟಾರ್ಪಲ್ ಮೂಲಕ ಮುಚ್ಚಿಕೊಂಡು ಸೂಚಿಸಿದ ಸಮಯದೊಳಗಾಗಿ ಸಂಘಗಳಿಗೆ/ಶೀತಲೀಕರಣ/ಡೈರಿಗೆ ಉಗ್ರಾಣಗಳಿಗೆ ಬೇಡಿಕೆಯಾನುಸಾರ ಸಾಗಾಣಿಕೆ ಮಾಡತಕ್ಕದ್ದು. ಶಿಕಾರಿಪುರ ಪಶುಆಹಾರ ಕಾರ್ಖಾನೆಯಲ್ಲಿ ನಿಗದಿತ ತೂಕದ ಪಶುಆಹಾರವನ್ನು ಪಡೆದು ಲಾರಿಗೆ ಏರಿಸುವ ಮತ್ತು ಸಂಘಗಳಲ್ಲಿ ಅಥವಾ ಶಿವಮೊಗ್ಗ ಹಾಲು ಒಕ್ಕೂಟವು ಸೂಚಿಸುವ ಸ್ಥಳದಲ್ಲಿ ಇಳಿಸುವ ಜವಾಬ್ದಾರಿ ಗುತ್ತಿಗೆದಾರದ್ದಾಗಿರುತ್ತದೆ. ಪಶುಆಹಾರ ಕಾರ್ಖಾನೆಯಲ್ಲಿ ಪಶುಆಹಾರವನ್ನು ಲಾರಿಗೆ ಏರಿಸುವ/ಭರ್ತಿ ಮಾಡಿಕೊಳ್ಳುವ ಮುನ್ನ ಪಶುಆಹಾರ ಪ್ರಮಾಣವು ಪಶುಆಹಾರ ಕಾರ್ಖಾನೆಯವರು ನೀಡುವ ಡಿಸ್‌ಪ್ಯಾಚ್ ಚಲನ್ ಅಥವಾ ಡೆಲವರಿ ನೋಟ್/ಇನ್‌ವಾಯ್ಸ್‌ನೊಂದಿಗೆ ಖಾತ್ರಿ ಪಡಿಸಿಕೊಳ್ಳುವುದು ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ. ಹಾಗೂ ಸಂಬಂಧಿಸಿದ/ಡೈರಿ/ಶೀಥಲೀಕರಣ ಕೇಂದ್ರಗಳಿಗೆ ಪಶುಆಹಾರ ಇಳಿಸಿದ ನಂತರ ಹೊರಗೆ ಹೋಗುವ ಮುನ್ನ ಸ್ವೀಕೃತಿ ಪತ್ರ ಪಡೆದು ಅಥವಾ ಸಂಬಂಧಿಸಿದ ವಿಭಾಗದಲ್ಲಿ ನೀಡುವ ಔಟ್ ಪಾಸ್ (Out Pass) ಪಡೆದು ಭದ್ರತಾ ವಿಭಾಗದಲ್ಲಿ ದಾಖಲಿಸಿ ಡೈರಿ/ಶೀತಲೀಕರಣ ಕೇಂದ್ರದಿಂದ ಹೊರಗೆ ಹೋಗತಕ್ಕದ್ದು.

1.2 ಗುತ್ತಿಗೆದಾರರು ಃ ಸಾಗಾಣಿಕೆದಾರರು, ಪಶುಆಹಾರವನ್ನು ನಿಗದಿತ ಸಂಘಗಳಿಗೆ/ಡೇರಿಗೆ ಅಥವಾ ಸೂಚಿಸಿದ ಶೀತಲೀಕರಣ ಕೇಂದ್ರಗಳ ಉಗ್ರಾಣಗಳಿಗೆ ಸಾಗಾಣಿಕೆ ಮಾಡಿ, ಅವನಿಗೆ /ಅವಳಿಗೆ ಒಪ್ಪಿಸಿರುವ ಮಾರ್ಗದಲ್ಲಿನ ನಿಗದಿಪಡಿಸಿರುವ ವೇಳಾ ಪಟ್ಟಿಯಂತೆ ಸಾಗಾಣಿಕೆ ಮಾಡತಕ್ಕದ್ದು. ಪಶುಆಹಾರವನ್ನು ಪಶುಆಹಾರ ಕೇಂದ್ರದಿಂದ ನೀಡುವ ಗೇಟ್‌ಪಾಸ್/ಡೆಲಿವರಿ ನೋಟ್/ಇನ್‌ವಾಯ್ಸ್ ಪ್ರಕಾರವೇ ಸಂಬಂಧಿಸಿದ ಸಂಘಗಳು/ಡೇರಿ/ಶೀತಲಿಕರಣ ಕೇಂದ್ರಗಳಿಗೆ ಒಕ್ಕೂಟದ ಬೇಡಿಕೆ ಪಟ್ಟಿಯಂತೆ ಸಾಗಾಣಿಕೆ ಮಾಡುವುದು. ಯಾವುದೇ ಕಾರಣಕ್ಕೂ ಇದನ್ನು ಬದಲಾವಣೆ ಮಾಡವುದಾಗಲಿ/ತಿದ್ದುವುದಾಗಲಿ ಮಾಡತಕ್ಕದ್ದಲ್ಲ.

1.3 ಪಶುಆಹಾರ ಕಾರ್ಖಾನೆಯಿಂದ ಪಡೆದ ಪಶುಆಹಾರವನ್ನು ಸಂಘ/ಡೇರಿ/ಶೀತಲೀಕರಣ ಕೇಂದ್ರದ ಉಗ್ರಾಣದಲ್ಲಿ ಅನ್‌ಲೋಡ್ ಮಾಡಿದ ನಂತರ ಡೇರಿ/ಶೀತಲಿಕರಣ ಕೇಂದ್ರದಿಂದ ಹೊರಗೆ ಹೋಗಲು ಡೇರಿ/ಶೀತಲೀಕರಣ ಕೇಂದ್ರಗಳ ಅಥವಾ ಸಂಬಂಧಿಸಿದ ವಿಭಾಗದಿಂದ ಸ್ವೀಕೃತಿ ಮತ್ತು ಅಧಿಕೃತ ಅನುಮತಿ (ಔಟ್ ಪಾಸ್) ಪಡೆಯತಕ್ಕದ್ದು.

ಟೆಂಡರ್‌ದಾರರ ಸಹಿ ಮತ್ತು ಹೆಸರು
(ದಪ್ಪ ಅಕ್ಷರಗಳಲ್ಲಿ)

1.4 ಪಶುಆಹಾರ ಕಾರ್ಖನೆಯಿಂದ ಪಶುಆಹಾರ, ಮಿನರಲ್ ಮಿಕ್ಚರ್ ಯೂರಿಯಾ ನೆಕ್ಕುಬಿಲ್ಲೆ ಮತ್ತು ಕರುಗಳ ಪಶುಆಹಾರವನ್ನು ನಿಗದಿತ ಸ್ಥಳದಿಂದ ಪಡೆದುಕೊಳ್ಳುವ ಸಂದರ್ಭದಲ್ಲಿ ಸಾಗಾಣಿಕೆ ಗುತ್ತಿಗೆದಾರರು ಅಥವಾ ಗುತ್ತಿಗೆದಾರರಿಂದ ಅಧಿಕೃತವಾಗಿ ನೇಮಿಸಲ್ಪಟ್ಟಿರುವ ಪ್ರತಿನಿಧಿಗಳು, ಸರಕಿನ ತೂಕ ಮತ್ತು ಪ್ರಮಾಣವನ್ನು ಪರೀಕ್ಷಿಸಿಕೊಂಡು ನಂತರ ಲಾರಿಗೆ ಭರ್ತಿ ಮಾಡಿಕೊಂಡು, ಸರಕು ಸಾಮಾಗ್ರಿಗಳು ಹರಿದು ಹಾಳಾಗದಂತೆ, ಮಳೆಗಾಳಿ, ಹವಾಮಾನ ಪ್ರಕೃತಿ ವಿಕೋಪ ಕಾರಣಗಳಿಂದ ಹಾಳಾಗದಂತೆ ಎಚ್ಚರಿಕೆಯಿಂದ ಸೂಚಿತ ಸಂಘಗಳಿಗೆ ಡೇರಿಗೆ/ಶೀತಲೀಕರಣ ಕೇಂದ್ರಗಳಿಗೆ, ಯಾವುದೇ ವ್ಯತ್ಯಾಯವಾಗದಂತೆ ಸಾಗಾಣಿಕೆ ಮಾಡತಕ್ಕದ್ದು ಮತ್ತು ಸ್ವೀಕೃತಿ ಪತ್ರ ಪಡೆದು ಸಾಗಾಣಿಕೆ ಬಿಲ್ಲಿನೊಂದಿಗೆ **ಪ್ರತಿ ಮಾಹೆ ಎರಡನೇ ತಾರೀಖಿನೊಳಗೆ** ಒಕ್ಕೂಟಕ್ಕೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಅಂತಹ ನಷ್ಟಕ್ಕೆ ಗುತ್ತಿಗೆದಾರರನ್ನೇ ಜವಾಬ್ದಾರರನ್ನಾಗಿ ಮಾಡಿ ಅವರ ಪಶುಆಹಾರ ಸಾಗಾಣಿಕೆ ಬಿಲ್ಲಿನಲ್ಲಿ ಒಕೂಟಕ್ಕೆ ಆದ ನಷ್ಟದ ಮೊತ್ತವನ್ನು ವಸೂಲಿ ಮಾಡಲು ಕ್ರಮವಿಡಲಾಗುವುದು.

**2.0 ಅರ್ಹತೆಗಳು :**

2.1 ಎಲ್ಲಾ ಅರ್ಜಿ ಮೂಲಗಳವರಿಗೂ ದರಪಟ್ಟಿ ದಸ್ತಾವೇಜು ಸಲ್ಲಿಸಲು ಮುಕ್ತ ಅವಕಾಶ ಕಲ್ಪಿಸಲಾಗಿದೆ.

2.2 ಗುತ್ತಿಗೆ ಪಡೆದುಕೊಳ್ಳಲು ಅರ್ಹರಾಗಬೇಕಾದರೆ ಪರಿಣಾಮಕಾರಿಯಾಗಿ ಕೆಲಸ/ ಕಾರ್ಯ ನಿರ್ವಹಿಸಲು ಬೇಕಾದ ಸಾಮರ್ಥ್ಯ ಅಗತ್ಯ ಸಂಪನ್ಮೂಲಗಳಿರುವುದರ ಬಗ್ಗೆ ದಾಖಲೆ, ಪುರಾವೆಗಳನ್ನು ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಒದಗಿಸತಕ್ಕದ್ದು. ಈ ಕಾರಣದಿಂದಾಗಿ ದರಪಟ್ಟಿ, ದಸ್ತಾವೇಜು ಸಲ್ಲಿಸುವುದರ ಪ್ರಸ್ತಾವನೆಗಳಲ್ಲಿ ಕೆಳಗೆ ನಮೂದಿಸಿರುವ ಮಾಹಿತಿಗಳನ್ನು ಪೂರೈಕೆ ಮಾಡತಕ್ಕದ್ದು.

ಅ) ಕಾಮಗಾರಿಗೆ ದರಪಟ್ಟಿ : ದಸ್ತಾವೇಜು ಸಲ್ಲಿಸುವವರು **2010 ರ** ಅಥವಾ ನಂತರದ ಮಾದರಿಯ 10/16 ಟನ್ ಮತ್ತು ಅದಕ್ಕಿಂತ ಹೆಚ್ಚಿನ ಸಾಮರ್ಥ್ಯದ ಕನಿಷ್ಠ 4 ವಾಹನಗಳನ್ನು ಹೊಂದಿರತಕ್ಕದು. ಮತ್ತು ಸಾಗಾಣಿಕೆಗೆ ಬಳಸುವ 4 ವಾಹನಗಳ ಆರ್.ಸಿ. ಪುಸ್ತಕದ ನಕಲು ಪ್ರತಿ ಹಾಗೂ ಸಂಬಂಧಪಟ್ಟ ಅಗತ್ಯ ದಾಖಲೆಗಳನ್ನು ದರಪಟ್ಟಿ – ದಸ್ತಾವೇಜಿನೊಂದಿಗೆ ಲಗತ್ತಿಸತಕ್ಕದ್ದು. (ಇನ್ಸೂರೆನ್ಸ್, ಎಫ್.ಸಿ., ಟ್ಯಾಕ್ಸ್ ಕಾರ್ಡ್, ಪರಮಿಟ್, ಮುಂತಾದ ವಾಹನಕ್ಕೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ನಾಲ್ಕು ಸಂಖ್ಯೆ ವಾಹನಗಳ ದಾಖಲಾತಿಗಳನ್ನು ಭರ್ತಿ ಮಾಡಿ ಕಡ್ಡಾಯವಾಗಿ ಅಪ್‌ಲೋಡ್ ಮಾಡತಕ್ಕದು. ತಪ್ಪಿದ್ದಲ್ಲಿ ಟೆಂಡರ್ ಅರ್ಜಿ ತಿರಸ್ಕರಿಸಲಾಗುವುದು.)

ಆ) ಪಶುಆಹಾರ ಸಾಗಾಣಿಕೆ ಒದಗಿಸುವ ಸರಕು ಸಾಗಾಣಿಕಾ ವಾಹನಗಳು ಸುಸ್ಥಿತಿಯಲ್ಲಿದ್ದು, ಟಾರ್ಪಲ್ ಮುಚ್ಚಿದ/ ಬಾಡಿ ಹೊಂದಿದ/ಟಾರ್ಪಲ್ ಹೊದಿಕೆಗೆ ಅನುಕೂಲತೆ ಇರುವ 2010 ರ ಅಥವಾ ನಂತರದ ಮಾಡೆಲ್ ಆಗಿರಬೇಕು.

ಇ) ಟೆಂಡರ್ ಸಲ್ಲಿಸುವವರ ಹೆಸರಿಗೆ ಕಡ್ಡಾಯವಾಗಿ ವಾಹನದ ದಾಖಲಾತಿಗಳಿರಬೇಕು. ಮತ್ತು ವಾಹನ ದಾಖಲಾತಿಗಳನ್ನು ಕಡ್ಡಾಯವಾಗಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅಪ್‌ಲೋಡ್ ಮಾಡತಕ್ಕದ್ದು. ವಾಹನ ದಾಖಲಾತಿಗಳನ್ನು ಅಪ್‌ಲೋಡ್ ಮಾಡದಿದ್ದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.

ಟೆಂಡರ್‌ದಾರರ ಸಹಿ ಮತ್ತು ಹೆಸರು
(ದಪ್ಪ ಅಕ್ಷರಗಳಲ್ಲಿ)

**3.0 ದರಪಟ್ಟಿ – ದಸ್ತಾವೇಜು ಸಲ್ಲಿಕೆ ವೆಚ್ಚ :**

3.1 ದರಪಟ್ಟಿ – ದಸ್ತಾವೇಜು ಸಲ್ಲಿಕೆಗೆ ಸಂಬಂಧಿಸಿದಂತೆ ಪೂರ್ವಭಾವಿ ಸಿದ್ಧತೆ, ಪ್ರಸ್ತಾವನೆ ಸಿದ್ಧಪಡಿಸುವುದು ಇವೇ ಮುಂತಾದುವಕ್ಕೆ ತಗಲುಬಹುದಾದ ಎಲ್ಲಾ ವೆಚ್ಚವನ್ನು ದರಪಟ್ಟಿ – ದಸ್ತಾವೇಜು ಸಲ್ಲಿಕೆದಾರರೇ ಭರಿಸತಕ್ಕದ್ದು ದರಪಟ್ಟಿ – ದಸ್ತಾವೇಜು ಸಲ್ಲಿಕೆ ಪ್ರಕ್ರಿಯೆ, ನಿರ್ವಹಣೆ ಹಾಗೂ ಫಲಿತಾಂಶದ ಪರಿಣಾಮಕ್ಕೆ ಸಂಬಂಧಿಸಿದಂತೆ, ಶಿವಮೊಗ್ಗ ಹಾಲು ಒಕ್ಕೂಟವು ಯಾವುದೇ ಕಾರಣಕ್ಕೂ ಜವಬ್ದಾರರಲ್ಲ.

**4.0 ಮಾರ್ಗ ಪರಿಶೀಲನೆಗೆ ಭೇಟಿ :**

4.1 ಪಶುಆಹಾರ ಬೇಡಿಕೆಯು ಹೆಚ್ಚಾಗಿದ್ದಾಗ ಅವಶ್ಯಕತೆಗೆ ಮತ್ತು ಬೇಡಿಕೆಗೆ ತಕ್ಕಂತೆ ಶಿವಮೊಗ್ಗ ಹಾಲು ಒಕ್ಕೂಟವು ಸೂಚಿಸಿದಂತೆ ಗುತ್ತಿಗೆದಾರರು ಸರಕು ಸಾಗಾಣಿಕೆ ವಾಹನಗಳ ಮೂಲಕ ಪಶುಆಹಾರ ಸಾಗಾಣಿಕೆ ಮಾಡಲು ಬದ್ಧರಿರಬೇಕು.

4.2 ದರಪಟ್ಟಿ – ದಸ್ತಾವೇಜು ಸಲ್ಲಿಸುವವರು, ತಾವು ಪಶುಆಹಾರ ವಿತರಣೆ ಮಾಡಬೇಕಾಗಿರುವ ಮಾರ್ಗಗಳ ಸಂಘಗಳನ್ನು/ ಡೇರಿ /ಶೀತಲಿಕರಣ ಕೇಂದ್ರಗಳನ್ನು ಪರಿಶೀಲಿಸಲು, ವೈಯಕ್ತಿಕ ಜವಾಬ್ದಾರಿಯ ಮೇಲೆ ಭೇಟಿ ನೀಡತಕ್ಕದ್ದು. ಅಧ್ಯಯನ ನಡೆಸತಕ್ಕದ್ದು, ದೊರೆಯುವ ಎಲ್ಲಾ ಮಾಹಿತಿಯನ್ನು ಗಮನದಲ್ಲಿರಿಸಿಕೊಂಡು ಅದರ ಆಧಾರದ ಮೇಲೆಯೇ ದರಪಟ್ಟಿ – ದಸ್ತಾವೇಜು ಸಿದ್ಧಪಡಿಸತಕ್ಕದ್ದು ಹಾಗೂ ಗುತ್ತಿಗೆದಾರನಾಗಿ ಪ್ರವೇಶ ಪಡೆಯತಕ್ಕದ್ದು.

**5.0 ದರಪಟ್ಟಿ – ದಸ್ತಾವೇಜು ನಿರ್ದೇಶನಗಳು :**

5.1 ದರಪಟ್ಟಿ – ದಸ್ತಾವೇಜುದಾರರು ತಾವು ಸಲ್ಲಿಸಬೇಕಾಗಿರುವ ದರಪಟ್ಟಿ – ದಸ್ತಾವೇಜು ಕುರಿತಂತೆ ನಿರ್ದೇಶಿಸಲಾಗಿರುವ ಎಲ್ಲಾ ನಿಯಮ ನಿಬಂಧನೆಗಳನ್ನು ಎಚ್ಚರಿಕೆಯಿಂದ ಪರೀಕ್ಷಿಸತಕ್ಕದ್ದು, ದರಪಟ್ಟಿ – ದಸ್ತಾವೇಜು ಸಲ್ಲಿಸಲು ಅಗತ್ಯವಾದ ಎಲ್ಲಾ ಅಧಿಕೃತ ಮಾಹಿತಿಗಳು, ದಾಖಲೆಗಳು ದರಪಟ್ಟಿ – ದಸ್ತಾವೇಜಿನೊಂದಿಗೆ ಲಗತ್ತಿಸತಕ್ಕದ್ದು ಹಾಗಲ್ಲದೆ ಪೂರ್ಣ ಮಾಹಿತಿ ನೀಡುವಲ್ಲಿ ವಿಫಲವಾದರೆ ದರಪಟ್ಟಿ – ದಸ್ತಾವೇಜನ್ನು ತಿರಸ್ಕರಿಸಲಾಗುತ್ತದೆ.

**6.0 ದರಪಟ್ಟಿ – ದಸ್ತಾವೇಜು ಸಲ್ಲಿಕೆ ಬೆಲೆ :**

6.1 ದರಪಟ್ಟಿ ಆಹ್ವಾನಿಸಿದ ಸಂದರ್ಭದಲ್ಲಿ ನಿಖರವಾಗಿ ಸೂಚಿಸಲಾಗಿರುವ ನಿಯಮ ನಿಬಂಧನೆಯಂತೆ ದರಪಟ್ಟಿ – ದಸ್ತಾವೇಜಿನ ಪರಿಶಿಷ್ಟ ಗುತ್ತಿಗೆಯ ಪೂರ್ಣ ಅವಧಿಗೆ ಎಂದಿರುವುದನ್ನು ದರಪಟ್ಟಿ – ದಸ್ತಾವೇಜುದಾರರು ಸ್ಪಷ್ಟ ಅಕ್ಷರಗಳಿಂದ ದರಪಟ್ಟಿ – ದಸ್ತಾವೇಜಿನಲ್ಲಿ ಖಚಿತವಾಗಿ ದಾಖಲಿಸತಕ್ಕದ್ದು, ಹಾಗಲ್ಲದೆ ಬೇರೆ ರೀತಿ ಇರತಕ್ಕದ್ದಲ್ಲ.

ಟೆಂಡರ್‌ದಾರರ ಸಹಿ ಮತ್ತು ಹೆಸರು
(ದಪ್ಪ ಅಕ್ಷರಗಳಲ್ಲಿ)

**7.0 ನಿಗದಿತ ದರ :**

7.1 ದಾಖಲೆಗೊಂಡ ದರ : ದರಪಟ್ಟಿ – ದಸ್ತಾವೇಜುದಾರನೊಂದಿಗೆ ಸಂಧಾನಗೊಂಡ ನಿಗದಿತ ದರ, ಗುತ್ತಿಗೆಯ ಪೂರ್ಣ ಅವಧಿಯಲ್ಲಿ ಜಾರಿಯಲ್ಲಿರತಕ್ಕದ್ದು, ಯಾವುದೇ ಕಾರಣಕ್ಕಾಗಿ ಯಾವುದೇ ಬಾಬ್ತಿನಲ್ಲಿ ಹೆಚ್ಚಳ ಆಗುವುದಕ್ಕೆ ಅವಕಾಶ ಇರುವುದಿಲ್ಲ ಹಾಗೂ ಅಂತಹ ವ್ಯತ್ಯಯವನ್ನು ಪರಿಗಣಿಸದೆ ತಿರಸ್ಕರಿಸಲಾಗುವುದು. ಕೆಲವು ವಿಶೇಷ ಸಂದರ್ಭಗಳಲ್ಲಿ ನಿಗದಿತ ದರವನ್ನು ಪರಿಷ್ಕರಿಸಲು ಗುತ್ತಿಗೆದಾರರು ಮನವಿ ನೀಡಿದಲ್ಲಿ ಸದರಿ ಮನವಿಯನ್ನು ಸಂದರ್ಭಕ್ಕನುಗುಣವಾಗಿ ಪರಿಗಣಿಸಬಹುದಾಗಿದೆ. ಆದರೆ ಈ ವಿಷಯದಲ್ಲಿ ಶಿವಮೊಗ್ಗ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾಗಿರುತ್ತದೆ.

7.2 **ಗುತ್ತಿಗೆದಾರರು ನಮೂದಿಸುವ ದರವು ಪಶುಆಹಾರವನ್ನು/ಸರಕನ್ನು ಲಾರಿಗೆ ಏರಿಸುವ/ಇಳಿಸುವ ವೆಚ್ಚವನ್ನು ಎಲ್ಲಾ ರೀತಿಯ ತೆರಿಗೆಗಳನ್ನು ರಾಜ್ಯ/ಕೇಂದ್ರ ಸರ್ಕಾರದ ಟೋಲ್ ಫೀ (ರಾಜ್ಯ/ರಾಷ್ಟ್ರೀಯ ಹೆದ್ದಾರಿ ಶುಲ್ಕ), ವೃತ್ತಿ ತೆರಿಗೆ, ಜಿ.ಎಸ್.ಟಿ.ಮುಂತಾದವುಗಳನ್ನು ಒಳಗೊಂಡಿರಬೇಕು.**

**7.3 ಪಶುಆಹಾರ ಸಾಗಾಣಿಕೆ ಗುತ್ತಿಗೆದಾರರು ನೀಡುವ ಸಾಗಾಣಿಕೆ ಬಿಲ್ಲಿನಲ್ಲಿ ಅನ್ವಯಿಸುವ ಜಿ.ಎಸ್.ಟಿ.ಯನ್ನು Reverse Charging Method ನಲ್ಲಿ ಒಕ್ಕೂಟದವತಿಯಿಂದ ಕಠಾಯಿಸಿ ಸರ್ಕಾರಕ್ಕೆ ಪಾವತಿಸಲಾಗುವುದು.**

**8.0 ದರಪಟ್ಟಿ – ದಸ್ತಾವೇಜಿನ ಸಿಂಧುತ್ವ :**

8.1 ದರಪಟ್ಟಿ – ದಸ್ತಾವೇಜಿನ ಸಲ್ಲಿಕೆ, ಅಂಗೀಕಾರಗೊಂಡಿರುವ ರೀತ್ಯಾ ದರಪಟ್ಟಿ ತೆರೆಯುವ ಪ್ರಕ್ರಿಯೆಯ ದಿನಾಂಕದಿಂದ 60 ದಿನಗಳು ಮಾತ್ರ ಅದರ ಸಿಂಧುತ್ವ ಊರ್ಜಿತವಾಗಿರುತ್ತದೆ.

8.2 ಕೆಲವಾರು ಅನಿವಾರ್ಯ ಪರಿಸ್ಥಿತಿಯಲ್ಲಿ ಮಾತ್ರ ದರಪಟ್ಟಿ – ದಸ್ತಾವೇಜಿನ ಸಿಂಧುತ್ವ ಅವಧಿ ಮುಕ್ತಾಯಗೊಳ್ಳುವ ಮುನ್ನ ಶಿವಮೊಗ್ಗ ಹಾಲು ಒಕ್ಕೂಟವು ದರ ಪಟ್ಟಿದಾರರನ್ನು ನಿಗದಿತ ಸಿಂಧುತ್ವ ಅವಧಿಯನ್ನು ವಿಸ್ತರಿಸಬಹುದಾಗಿದೆ. ವಿಸ್ತರಣೆ ಕೋರಿಕೆಯನ್ನು ಬರವಣಿಗೆಯಲ್ಲಿ, ದೂರವಾಣಿ ಸಂಪರ್ಕದ ಮೂಲಕ ಮಾಡಬಹುದಾಗಿದೆ. ಆದರೆ ದರಪಟ್ಟಿ – ದಸ್ತಾವೇಜು ಸಲ್ಲಿಕೆ ಸಂದರ್ಭದಲ್ಲಿ ಒದಗಿಸಲಾಗಿದ್ದ ಆಧಾರ ನೀಡಿಕೆಯನ್ನು (ಭದ್ರತಾ ಠೇವಣಿಯನ್ನು) ಅದಕ್ಕನುಗುಣವಾಗಿ ವಿಸ್ತರಿಸಲು ಗುತ್ತಿಗೆದಾರರಿಗೆ ತಿಳಿಸಬಹುದಾಗಿರುತ್ತದೆ.

**9.0 ದರಪಟ್ಟಿ – ದಸ್ತಾವೇಜು ಸಲ್ಲಿಕೆಗೆ ಆಧಾರ ನೀಡಿಕೆ :**

9.1 ದರಪಟ್ಟಿದಾರ ದರಪಟ್ಟಿ – ದಸ್ತಾವೇಜು ಸಲ್ಲಿಕೆ ನಿಯಮದಡಿ ಸಾಗಾಣಿಕೆ ಕಾಮಗಾರಿಗೆ ಅವುಗಳ ಮುಂದೆ ಸೂಚಿಸಿರುವಂತೆ ಇ–ಪ್ರೋಕ್ಯೂರ್‌ಮೆಂಟ್ ನಿಯಮವಳಿಯಂತೆ ಆಧಾರ ನೀಡಿಕೆ (ಇ.ಎಂ.ಡಿ.) ಒದಗಿಸತಕ್ಕದ್ದು. ಇ.ಎಂ.ಡಿ.ಯನ್ನು ಇ–ಪ್ರೋಕ್ಯೂರ್‌ಮೆಂಟ್ ನಿಯಮವಳಿಯಂತೆ ಸಲ್ಲಿಸುವುದು. ಕಡಿಮೆ ಇ.ಎಂ.ಡಿ ಸಲ್ಲಿಸಿದ ಟೆಂಡರ್‌ಗಳನ್ನು ತಿರಸ್ಕರಿಸುವುದು.

ಟೆಂಡರ್‌ದಾರರ ಸಹಿ ಮತ್ತು ಹೆಸರು
(ದಪ್ಪ ಅಕ್ಷರಗಳಲ್ಲಿ)

9.2 ಆಧಾರ ನೀಡಿಕೆ ಮೊತ್ತವನ್ನು (ಇ.ಎಂ.ಡಿ.ಮೊತ್ತವನ್ನು) ಟೆಂಡರ್ ಪ್ರಕಟಣೆಯಲ್ಲಿ ಪ್ರಕಟಿಸಿದಂತೆ ಇ–ಪ್ರೋಕ್ಯೂರ್‌ಮೆಂಟ್ ನಿಯಾಮವಳಿಯಂತೆ ಸಲ್ಲಿಸುವುದು.

9.3 ದರಪಟ್ಟಿ – ದಸ್ತಾವೇಜುದಾರ ಪ್ರತಿ ಮಾರ್ಗದ ಸಾಗಾಣಿಕೆ ಕಾಮಗಾರಿಗೂ ಪ್ರತ್ಯೇಕ ದರಪಟ್ಟಿ – ದಸ್ತಾವೇಜು ಸಲ್ಲಿಸತಕ್ಕದ್ದು.

9.4 ಯಾವುದೇ ದರಪಟ್ಟಿ ಸಲ್ಲಿಕೆಯ ಜೊತೆ ನಿಗಧಿತ ಆಧಾರ (ಇ.ಎಂ.ಡಿ.) ನೀಡಿಕೆ ಇರದಿದ್ದರೆ ಅಥವಾ ನಿಗದಿತ ಮೊತ್ತಕ್ಕಿಂತ ಕಡಿಮೆ ಇದ್ದರೆ ಅಂತಹ ದರಪಟ್ಟಿ – ದಸ್ತಾವೇಜನ್ನು ಶಿವಮೊಗ್ಗ ಹಾಲು ಒಕ್ಕೂಟವು ತಿರಸ್ಕರಿಸುತ್ತದೆ.

9.5 ಅಂಗೀಕಾರ ಆಗದ ದರಪಟ್ಟಿದಾರರಿಗೆ ಅವರು ಸಲ್ಲಿಸಿರುವ ಆಧಾರ (ಇ.ಎಂ.ಡಿ.) ಮೊತ್ತವನ್ನು ಆದಷ್ಟು ಶೀಘ್ರವಾಗಿ ಪ್ರಾಮಾಣಿಕವಾಗಿ ಹಿಂತಿರುಗಿಸಲಾಗುವುದು. ಅಂದರೆ ಅದು ನಮ್ಮ ದಸ್ತಾವೇಜಿನಲ್ಲಿ ಪ್ರಕಟಿಸಿರುವಂತೆ ದರಪಟ್ಟಿಯ ಸಿಂಧುತ್ವದ ನಿಗದಿತ ಅವಧಿಯ ನಂತರದ 30 ದಿನಗಳೊಳಗಾಗಿ

9.6 ಅಂಗೀಕಾರ ಆಗುವ ದರಪಟ್ಟಿದಾರರಿಗೆ, ಅವರು ಸಲ್ಲಿಸಿರುವ ಆಧಾರ ಮೊತ್ತವನ್ನು ಒಪ್ಪಂದಕ್ಕೆ ಸಹಿ ಹಾಕಿದಾಗ ಹಾಗೂ ಅಗತ್ಯವಾದ ಕಾರ್ಯ ನಿರ್ವಹಣಾ ಪ್ರಮಾಣ ಪತ್ರವನ್ನು ಒದಗಿಸಿದಾಗ ಹಿಂತಿರುಗಿಸಲಾಗುವುದು.

9.7 ದರಪಟ್ಟಿದಾರ ಸಲ್ಲಿಸಿರುವ ಇ.ಎಂ.ಡಿ./ಆಧಾರ ಮೊತ್ತಕ್ಕೆ ಬಡ್ಡಿಯನ್ನು ಶಿವಮೊಗ್ಗ ಹಾಲು ಒಕ್ಕೂಟ ಪಾವತಿಸುವುದಿಲ್ಲ.

10.0 ದರಪಟ್ಟಿದಾರ ಸಲ್ಲಿಸುವ ಇ.ಎಂ.ಡಿ./ಆಧಾರ ಮೊತ್ತವನ್ನು ಕೆಳಕಂಡ ಸಂಧರ್ಭಗಳಲ್ಲಿ ಮುಟ್ಟುಗೋಲು ಹಾಕಿಕೊಳ್ಳಬಹುದು.

10.1 ಅಂಗೀಕಾರ ಆದ ಕಾರಣ ದರಪಟ್ಟಿದಾರನು ನಿಗದಿತ ಕಾಲಾವಧಿಯಲ್ಲಿ

ಅ) ಠೇವಣಿ ಹಣ ಪಾವತಿಸಿ ಒಪ್ಪಂದಕ್ಕೆ ಸಹಿ ಮಾಡದೇ ಇದ್ದರೆ

**ಅಥವಾ**

ಈ) ಅಗತ್ಯ ಕಾರ್ಯ ನಿರ್ವಹಣಾ ಭರವಸಾ ಪತ್ರ ನೀಡದಿದ್ದರೆ ಅಥವಾ ನಿಗಧಿತ ಅವಧಿಯೊಳಗೆ ನಿಗಧಿಪಡಿಸಿದ ಸಾಮರ್ಥ್ಯದ ವಾಹನಗಳನ್ನು ಒದಗಿಸದಿದ್ದರೆ,

**11.0 ದಸ್ತಾವೇಜು ಮಾದರಿ ಹಾಗೂ ದರಪಟ್ಟಿಗೆ ಸಹಿ ಮಾಡುವುದು :**

11.1 ದರಪಟ್ಟಿ ಸಲ್ಲಿಕೆಗೆ ಸಂಬಂಧಿಸಿದಂತೆ ತಾನು ಖರೀದಿಸಿದ ದಸ್ತಾವೇಜು ಮಾದರಿ, ಅದನ್ನು ಸಿದ್ದಪಡಿಸಿ ಅಧಿಕೃತ ಮೂಲ ದಾಖಲೆಗಳೊಂದಿಗೆ ಪ್ರಸ್ತಾವನೆ ಸಲ್ಲಿಸುವುದು.

ಟೆಂಡರ್‌ದಾರರ ಸಹಿ ಮತ್ತು ಹೆಸರು
(ದಪ್ಪ ಅಕ್ಷರಗಳಲ್ಲಿ)

11.2 ದರಪಟ್ಟಿ ಸಲ್ಲಿಕೆಗೆ ಸಂಬಂಧಿಸಿದ ದಸ್ತಾವೇಜಿನ ಎಲ್ಲಾ ಪುಟಗಳಲ್ಲಿ ಅಧಿಕೃತವಾಗಿ ನಾಮ ನಿರ್ದೇಶನಗೊಂಡ ಗುತ್ತಿಗೆ ವ್ಯಕ್ತಿ ಸಹಿ ಮಾಡತಕ್ಕದ್ದು, ದಸ್ತಾವೇಜಿನ ಎಲ್ಲಾ ಪುಟಗಳಲ್ಲಿ ಭರ್ತಿಮಾಡಿದ ವ್ಯಕ್ತಿ ಅಥವಾ ನಾಮನಿರ್ದೇಶನಗೊಂಡ ವ್ಯಕ್ತಿ ಆತನ ಹೆಸರಿನ ಅಧ್ಯ–ಅಕ್ಷರದಲ್ಲಿ ಸಹಿಯನ್ನು ಮಾಡತಕ್ಕದ್ದು.

**12.0 ಮೊಹರು ಮಾಡುವುದು ಹಾಗೂ ದರಪಟ್ಟಿ ಸಿದ್ಧಪಡಿಸುವುದು :**

12.1 ದರಪಟ್ಟಿ ಸಲ್ಲಿಕೆದಾರ ಈ ಸಂಬಂಧದ ತಾಂತ್ರಿಕ ಮತ್ತು ವಾಣಿಜ್ಯ ದಸ್ತಾವೇಜನ್ನು ಪ್ರತ್ಯೇಕವಾಗಿ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡತಕ್ಕದು.

**13.0 ದರಪಟ್ಟಿ ಸಲ್ಲಿಕೆಗೆ ಅಂತಿಮ ದಿನಾಂಕ ಪ್ರಕಟಣೆ :**

13.1 ದರಪಟ್ಟಿ ಸಲ್ಲಿಕೆಗೆ ಆಹ್ವಾನಿಸಿದ ಸಂದರ್ಭ ನಿಗದಿಪಡಿಸಿದ ದಿನಾಂಕ ಹಾಗೂ ವೇಳೆಯೊಳಗೆ ಸಂಬಂಧಪಟ್ಟ ದಸ್ತಾವೇಜನ್ನು ಕರ್ನಾಟಕ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಅಪ್‌ಲೋಡ್ ಮಾಡತಕ್ಕದು.

13.2 ಶಿವಮೊಗ್ಗ ಹಾಲು ಒಕ್ಕೂಟವು ತನ್ನ ವಿವೇಚನೆಗೆ ಅಗತ್ಯ ಕಂಡು ಬಂದರೆ ಟೆಂಡರ್‌ನಲ್ಲಿ ಪ್ರಕಟಿಸಿದ ಅಂತಿಮ ದಿನಾಂಕವನ್ನು ಮುಂದೂಡಬಹುದಾಗಿರುತ್ತದೆ. ನಂತರ ತಿದ್ದುಪಡಿ ದಿನಾಂಕವನ್ನು ಪ್ರಕಟಿಸಲು ಶಿವಮೊಗ್ಗ ಹಾಲು ಒಕ್ಕೂಟವು ಹಾಗೂ ದರಪಟ್ಟಿದಾರರ ನಡುವಣ ತನ್ನ ಹಕ್ಕು ಹಾಗೂ ಬಾಧ್ಯತೆಯಿಂದ ಹಿಂದೆ ಪ್ರಕಟಿಸಿದ ಮೂಲ ಕೊನೆಯ ದಿನಾಂಕದ ಸಿಂಧುತ್ವವನ್ನು ರದ್ದುಗೊಳಿಸಿ, ಮುಂದೂಡಿದ ಹೊಸ ಅಂತಿಮ ದಿನಾಂಕವನ್ನು ಪ್ರಕಟಿಸಿ ಸಿಂಧುಗೊಳಿಸಬಹುದಾಗಿರುತ್ತದೆ.

ಟೆಂಡರ್‌ದಾರರ ಸಹಿ ಮತ್ತು ಹೆಸರು
(ದಪ್ಪ ಅಕ್ಷರಗಳಲ್ಲಿ)

**14.0 ತಡವಾಗಿ ಸಲ್ಲಿಕೆಯಾಗುವ ದರಪಟ್ಟಿ ದಸ್ತಾವೇಜುಗಳು :**

14.1 ಶಿವಮೊಗ್ಗ ಹಾಲು ಒಕ್ಕೂಟವು ಅಂತಿಮ ದಿನಾಂಕ ಹಾಗೂ ವೇಳೆ ಮೀರಿ ತಲುಪುವ ಯಾವುದೇ ದರಪಟ್ಟಿ ದಸ್ತಾವೇಜುಗಳನ್ನು ದರಪಟ್ಟಿ ಸಲ್ಲಿಕೆಗೆ ಆಹ್ವಾನಿಸಿದ ಸಂದರ್ಭದಲ್ಲಿ ಪ್ರಕಟಿಸಲಾದ ಅಂತಿಮ ದಿನಾಂಕ ಹಾಗೂ ವೇಳೆಯನ್ನು ಪರಿಗಣಿಸಿ ಹಾಗೂ ಕಾನೂನು ನಿಯಮದ ಹಿನ್ನೆಲೆಯಲ್ಲಿ ಅವುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೊರ್ಟಲ್‌ನಲ್ಲಿ ತಿರಸ್ಕಾರವಾದಲ್ಲಿ ಒಕ್ಕೂಟವು ಜವಾಬ್ದಾರಿಯಲ್ಲ.

**15.0 ದರಪಟ್ಟಿ ದಸ್ತಾವೇಜು ತೆರೆಯುವ ಕ್ರಮ :**

15.1 ಶಿವಮೊಗ್ಗ ಹಾಲು ಒಕ್ಕೂಟವು ದರಪಟ್ಟಿ ದಸ್ತಾವೇಜು ಸಲ್ಲಿಸಿದ ಎಲ್ಲಾ ದರಪಟ್ಟಿದಾರರ ಇ–ಪೋರ್ಟಲ್ ಟೆಂಡರ್‌ನ್ನು ಶಿವಮೊಗ್ಗ ಹಾಲು ಒಕ್ಕೂಟದ ಶೇಖರಣೆ ಮತ್ತು ತಾಂತ್ರಿಕ ವಿಭಾಗದಲ್ಲಿ ತೆರೆಯಲಾಗುತ್ತದೆ. ಅಂತಿಮ ದಿನಾಂಕ ಹಾಗೂ ವೇಳೆಗೆ ಅನುಗುಣವಾಗಿ ಈ ಪ್ರಕ್ರಿಯೆ ನಡೆಯುತ್ತದೆ.

**16.0 ಜವಾಬ್ದಾರಿಯುತವಾಗಿ ಸಲ್ಲಿಕೆಯಾಗಿರುವ ಕುರಿತು ನಿರ್ಧಾರ :**

16.1 ದರಪಟ್ಟಿ ದಸ್ತಾವೇಜಿನ ವಿವರ ಮೌಲ್ಯಮಾಪನಕ್ಕೆ ಪೂರ್ವಭಾವಿಯಾಗಿ ಪ್ರತಿಯೊಂದು ದರಪಟ್ಟಿ ದಸ್ತಾವೇಜುಗಳು ಎಲ್ಲಾ ರೀತಿಯಿಂದಲೂ ಅಗತ್ಯಕ್ಕೆ ತಕ್ಕಂತೆ ಜವಾಬ್ದಾರಿಯುತವಾಗಿ ಸಲ್ಲಿಕೆ ಆಗಿದೆಯೇ ಎಂದು ನಿರ್ಧಾರ ಕೈಗೊಳ್ಳಲು ಶಿವಮೊಗ್ಗ ಹಾಲು ಒಕ್ಕೂಟವು ಮುಂದಾಗುತ್ತದೆ.

16.2 ನಿಯಮದ ರೀತ್ಯಾ ಇಂತಹ ನಿರ್ಧಾರ ಕೈಗೊಳ್ಳಲು ಎಲ್ಲಾ ರೀತಿಯಿಂದಲೂ ಜವಾಬ್ದಾರಿಯುತವಾಗಿ ಸಲ್ಲಿಕೆಯಾಗಿರುವ ದರಪಟ್ಟಿ ದಸ್ತಾವೇಜು ಎಂದು ಪರಿಗಣಿತವಾಗಲು ಅದು ವಿಧಿಸಲಾಗಿರುವ ನೀತಿ, ನಿಯಮಗಳಿಗೆ ವಿವರ ಮಾಹಿತಿಗೆ ಬದ್ಧವಾಗಿದ್ದು, ಯಾವುದೇ ರೀತಿಯಿಂದಲೂ ವ್ಯತ್ಯಯಗೊಳ್ಳದ ಹಾಗೂ ಕಾಯ್ದಿರಿಸಿದ ರೀತಿಯದ್ದಾಗಿರಬೇಕು. ವ್ಯತ್ಯಯ ಅಥವಾ ಕಾಯ್ದಿರಿಸುವಿಕೆಯಿಂದಾಗಿ ಅದರ ಆಶಯ ಅಥವಾ ಗುತ್ತಿಗೆಯ ಕಾರ್ಯವೈಖರಿಯ ಮೇಲೆ ದುಷ್ಪರಿಣಾಮ ಬೀರುತ್ತದೆ. ಅಥವಾ ಕೆಲದೃಷ್ಟಿಯ ಇತಿಮಿತಿಗೊಳ್ಳುತ್ತದೆ. ಜೊತೆಗೆ ದರಪಟ್ಟಿ ದಸ್ತಾವೇಜಿನೊಂದಿಗೆ ಅಸಂಗತಗೊಳ್ಳುತ್ತದೆ. ಶಿವಮೊಗ್ಗ ಹಾಲು ಒಕ್ಕೂಟವು ಹಕ್ಕು ಅಥವಾ ದರಪಟ್ಟಿದಾರರ ಗುತ್ತಿಗೆ ಬಾಧ್ಯತೆ ಇವುಗಳ ಸುಧಾರಣೆ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ವ್ಯತ್ಯಯ ಹಾಗೂ ಕಾಯ್ದಿರಿಸುವಿಕೆ ಇತರೆ ಸ್ಪರ್ಧಾತ್ಮಕ ದರಪಟ್ಟಿದಾರರ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಹಾಗಾಗಿ ಎಲ್ಲಾ ರೀತಿಯಿಂದಲೂ ಜವಾಬ್ದಾರಿಯುತ ದರಪಟ್ಟಿ ದಸ್ತಾವೇಜಿನ ಸಲ್ಲಿಕೆ ಆಗಬೇಕಾಗಿದೆ.

ಟೆಂಡರ್‌ದಾರರ ಸಹಿ ಮತ್ತು ಹೆಸರು
(ದಪ್ಪ ಅಕ್ಷರಗಳಲ್ಲಿ)

16.3 ದರಪಟ್ಟಿ ದಸ್ತಾವೇಜಿನ ಅಗತ್ಯಕ್ಕೆ ಅನುಗುಣವಾಗಿ ಜವಾಬ್ದಾರಿಯುತ ಪ್ರತಿಕ್ರಿಯೆ ಇಲ್ಲವಾದಲ್ಲಿ ಅಂತಹವನ್ನು ಶಿವಮೊಗ್ಗ ಹಾಲು ಒಕ್ಕೂಟವು ತಿರಸ್ಕರಿಸುತ್ತದೆ. ಅನಧಿಕೃತ ವ್ಯತ್ಯಯ ಅಥವಾ ಕಾಯ್ದಿರಿಸುವಿಕೆಯನ್ನು ಸರಿಪಡಿಸಲು ಹಿಂತಿರುಗಿ ಪಡೆದುದ್ದನ್ನು ಮತ್ತೆ ಜವಾಬ್ದಾರಿಯುತಗೊಳಿಸಲಾಗುವುದಿಲ್ಲ.

17.0 ಶಿವಮೊಗ್ಗ ಹಾಲು ಒಕ್ಕೂಟ ಯಾವುದೇ ದರಪಟ್ಟಿ ದಸ್ತಾವೇಜನ್ನು ಸ್ವೀಕರಿಸುವುದಕ್ಕೂ ತಿರಸ್ಕರಿಸುವುದಕ್ಕೂ ಅಥವಾ ಎಲ್ಲವನ್ನು ಸಾರಾ ಸಗಟಾಗಿ ತಿರಸ್ಕರಿಸುವುದಕ್ಕೂ ಹಕ್ಕುಳ್ಳದ್ದಾಗಿರುತ್ತದೆ.

17.1 ಮೇಲಿನ ವಿಷಯಗಳನ್ನು ಪೂರೈಸಲಾಗದ ದಸ್ತಾವೇಜನ್ನು ಯಾವುದೇ ಸಮಯದಲ್ಲಿ ಗುತ್ತಿಗೆ ನೀಡಿಕೆಗೆ ಪೂರ್ವಭಾವಿಯಾಗಿ ತಿರಸ್ಕರಿಸುವ ಅಥವಾ ಸ್ವೀಕರಿಸುವ, ಇಲ್ಲವೇ ಪ್ರಕ್ರಿಯೇಯನ್ನೇ ರದ್ದುಪಡಿಸುವ ಹಾಗೂ ಸಾರಾಸಗಟಾಗಿ ಎಲ್ಲವನ್ನೂ ತಿರಸ್ಕರಿಸುವ ಹಕ್ಕನ್ನು ಶಿವಮೊಗ್ಗ ಹಾಲು ಒಕ್ಕೂಟ ಕಾಯ್ದಿರಿಸಿಕೊಂಡಿದೆ. ಪರಿಣಾಮಕ್ಕೆ ಗುರಿಯಾಗುವ ದರಪಟ್ಟಿದಾರರಿಗೆ ಯಾವುದೇ ರೀತಿಯ ಉಪಶಮನಕ್ಕೂ ಬದ್ಧವಾಗದೆ ಮಾಹಿತಿಯನ್ನು ನೀಡಬೇಕಾದ ಹೊಣೆಗಾರಿಕೆಯು ಇಲ್ಲದೇ ಕ್ರಮ ತೆಗೆದುಕೊಳ್ಳಲು ಶಿವಮೊಗ್ಗ ಹಾಲು ಒಕ್ಕೂಟ ಹಕ್ಕುಳ್ಳದ್ದಾಗಿದೆ.

**18.0 ಗುತ್ತಿಗೆ ನೀಡಿಕೆ :**

18.1 ದರಪಟ್ಟಿ ದಸ್ತಾವೇಜು ಹಲವು ದೃಷ್ಟಿಯಿಂದ ಜವಾಬ್ದಾರಿಯುತವಾದುದು ಎಂದು ಪರಿಗಣಿತವಾಗಿ ಕನಿಷ್ಟ ದರವನ್ನು ದರಪಟ್ಟಿಯಲ್ಲಾಗಲೀ ಅಥವಾ ಸಂಧಾನದಲ್ಲಾಗಲೀ ಸೂಚಿಸಿರುವುದರಿಂದ ಶಿವಮೊಗ್ಗ ಹಾಲು ಒಕ್ಕೂಟವು ನಿಯಮ 15 ರ ಅಡಿಯಲ್ಲಿ ದರಪಟ್ಟಿದಾರನಿಗೆ ಗುತ್ತಿಗೆ ನೀಡಬಹುದಾಗಿರುತ್ತದೆ. ಹಲವು ದೃಷ್ಟಿಯಿಂದ ಜವಾಬ್ದಾರಿಯುತವಾದವು ಎಂದು ಪರಿಗಣಿತವಾದ ದರಪಟ್ಟಿ ದಸ್ತಾವೇಜಿನ ತೌಲನಿಕ ತಃಖ್ತೆ ಮೂಲಕ ಮೌಲ್ಯಮಾಪನ ಮಾಡಲಾಗದೆ ಹಾಗೂ ಗುತ್ತಿಗೆ ಕಾಮಗಾರಿಯನ್ನು ಪರಿಣಾಮಯುತವಾಗಿ ನಿರ್ವಹಿಸಬಲ್ಲೆ ಎಂಬ ಸಾಮರ್ಥ್ಯ ಹಾಗೂ ಸಂಪನ್ಮೂಲದ ಬಗ್ಗೆ ದೃಢೀಕರಣ ಒದಗಿಸಿದರೆ ಗುತ್ತಿಗೆಯನ್ನು ನೀಡಬಹುದಾಗಿರುತ್ತದೆ.

18.2 ಶಿವಮೊಗ್ಗ ಹಾಲು ಒಕ್ಕೂಟವು ನಾಮಮಾತ್ರ ಸದಸ್ಯತ್ವಕ್ಕಾಗಿ ನಿಗದಿತ ಮೊತ್ತ ಪಾವತಿಸಿದ ಅವರು / ಅವಳು ಪಡೆದುಕೊಂಡ ನಂತರ ಗುತ್ತಿಗೆಯನ್ನು ನೀಡಬಹುದಾಗಿರುತ್ತದೆ.

**ಟೆಂಡರ್‌ದಾರರ ಸಹಿ ಮತ್ತು ಹೆಸರು**

(ದಪ್ಪ ಅಕ್ಷರಗಳಲ್ಲಿ)

# ಅನುಬಂಧ – ಸಿ

1) ಟೆಂಡರ್ ಹಾಕಲು ರೂ.2,00,000/– ಇ.ಎಂ.ಡಿ.ಯನ್ನು ಇ–ಪ್ರೋಕ್ಯೂರ್‌ಮೆಂಟ್ ನಿಯಾಮವಳಿಯಂತೆ ಪಾವತಿಸುವುದು.
2) ರೂ.2,00,000/– ಇ.ಎಂ.ಡಿ.ಯನ್ನು ಇ–ಪೋರ್ಟಲ್ ಮುಖಾಂತರ ಪಾವತಿಸಿ ಪಶುಆಹಾರ ಸಾಗಾಣೀಕೆ ಮಾರ್ಗಕ್ಕೆ ಟೆಂಡರ್ ಸಲ್ಲಿಸಬಹುದು. ಆದರೆ ಟೆಂಡರ್‌ದಾರರ ಬಳಿ ಕಡ್ಡಾಯವಾಗಿ ತಮ್ಮ ಹೆಸರಿನಲ್ಲಿ ಸುಸ್ಥಿತಿಯುಳ್ಳ 10/16 ಟನ್ ಹೆಚ್ಚಿನ ಸಾಮರ್ಥ್ಯದ ಕನಿಷ್ಠ ನಾಲ್ಕು ಸರುಕು ಸಾಗಾಣಿಕೆ ವಾಹನಗಳು ಇರಬೇಕು.
3) ಪಶುಆಹಾರ ಸಾಗಾಣಿಕೆ ಮಾರ್ಗಕ್ಕೆ ಟೆಂಡರ್ ಪಡೆದವರು ಮಾರ್ಗದ ಮುಂದೆ ಸೂಚಿಸಿರುವಂತೆ ಕರಾರು ಒಪ್ಪಂದ ಮಾಡಿಕೊಳ್ಳುವ ಸಮಯದಲ್ಲಿ ಎಫ್.ಡಿ ಭದ್ರತಾ ಠೇವಣಿಯನ್ನು ನೀಡುವುದು. ಭದ್ರತಾ ಠೇವಣಿಗೆ ಒಕ್ಕೂಟದಿಂದ ಯಾವುದೇ ರೀತಿಯ ಬಡ್ಡಿ ನೀಡಲಾಗುವುದಿಲ್ಲ.

ಟೆಂಡರ್‌ದಾರರ ಸಹಿ ಮತ್ತು ಹೆಸರು
(ದಪ್ಪ ಅಕ್ಷರಗಳಲ್ಲಿ)

**ವಿಶೇಷ ಸೂಚನೆ :**

1) ಟೆಂಡರ್‌ನಲ್ಲಿ ಪ್ರಕಟಿಸಿದ ಮಾದರಿಯ/ಸಾಮರ್ಥ್ಯದ ಕನಿಷ್ಠ ನಾಲ್ಕು ವಾಹನವುಳ್ಳವರು ಮಾತ್ರ ಪ್ರತಿ ಟೆಂಡರ್ ಅರ್ಜಿ ಜೊತೆಯಲ್ಲಿ ವಾಹನವಾರು ದಾಖಲಾತಿಗಳನ್ನು ಲಗತ್ತಿಸಿರಬೇಕು.

2) ಟೆಂಡರ್‌ನಲ್ಲಿ ಸೂಚಿಸಿರುವ ಮಾರ್ಗಕ್ಕೆ ಪಶುಆಹಾರವನ್ನು ಸಾಗಾಣಿಕೆ ಮಾಡಲು ಸುಸ್ಥಿತಿಯಲ್ಲಿರುವ ಸರಕು ಸಾಗಿಸುವ 10/16 ಟನ್/ ಹೆಚ್ಚಿನ ಸಾಮರ್ಥ್ಯವುಳ್ಳ 2010 ರ ಅಥವಾ ನಂತರದ ಮಾದರಿಯ ಟಾರ್ಪಲ್ ಮುಚ್ಚಿದ ಬಾಡಿಯುಳ್ಳ ವಾಹನಗಳು ಇರಬೇಕು ಅಥವಾ ಟಾರ್ಪಲ್ ಮುಚ್ಚಳಿಕೆ ಹೊದಿಸುವಿಕೆ ಕಡ್ಡಾಯವಾಗಿವಾಗಿರುತ್ತದೆ.

3) ಗುತ್ತಿಗೆ ವರ್ಗಾವಣೆಗೆ ಅವಕಾಶವಿರುವುದಿಲ್ಲ. ಆದರೂ ಸಹ ಅನಿವಾರ್ಯ ಸಂದರ್ಭದಲ್ಲಿ ಆದೇಶ ಪಡೆದು ವಾಹನ ಸಮರ್ಪಕವಾಗಿ ಓಡಿಸಿದ ಕನಿಷ್ಟ ಮೂರು ತಿಂಗಳ ನಂತರ ಟೆಂಡರ್‌ನಲ್ಲಿ ಪ್ರಕಟಿಸಿದಂತೆ ಕನಿಷ್ಠ 4 ವಾಹನಗಳನ್ನು ಹೊಂದಿರುವ ಗುತ್ತಿಗೆದಾರರಿಗೆ ನಿಯಾಮಾನುಸಾರ ವರ್ಗಾವಣೆ ಶುಲ್ಕ ರೂ. 10,000/– ಪಾವತಿಸಿದಲ್ಲಿ ಒಂದು ಬಾರಿ ಮಾತ್ರ ವರ್ಗಾವಣೆ ಮಾಡಲಾಗುವುದು.

4) ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಕಹಾಮದಿಂದ ಕಾಲಕಾಲಕ್ಕೆ ಪಶುಆಹಾರ ಪರಿಮಾಣವನ್ನು ಹಂಚಿಕೆ ಮಾಡುವ ಮತ್ತು ಕಹಾಮ ಶಿಕಾರಿಪುರ/ಗುಬ್ಬಿಯಲ್ಲಿ ಪಶುಆಹಾರ ಉತ್ಪಾದನೆಯಾಗುವ ಪರಿಮಾಣದಲ್ಲಿ ವ್ಯತ್ಯಾಸವಾಗಬಹುದು. ಆದ್ದರಿಂದ ಮಾಸಿಕ ಪಶುಆಹಾರ ಸಾಗಾಣಿಕಾ ಪರಿಮಾಣವು ಸಹ ವ್ಯತ್ಯಾಸವಾಗುವುದು. ಇದಕ್ಕೆ ಬದ್ಧರಾದ ಸಾಗಾಣಿಕೆ ಗುತ್ತಿಗೆದಾರರು ಮಾತ್ರ ಟೆಂಡರ್ ಅರ್ಜಿ ಸಲ್ಲಿಸಬಹುದು.

5) ಪಶುಆಹಾರ ಸಾಗಾಣಿಕೆ ಮಾರ್ಗಕ್ಕೆ 1 ವರ್ಷದ ಅವಧಿಗೆ ವಾಹನ ಒದಗಿಸಲು ಟೆಂಡರ್ ಕರೆಯಲಾಗಿದೆ. ಈ ಮೇಲೆ ತಿಳಿಸಿರುವಂತೆ ಟೆಂಡರ್ ಒಪ್ಪಿಗೆಯಾದಲ್ಲಿ ಮಾರ್ಗದ ಮುಂದೆ ಸೂಚಿಸಿದ ಭದ್ರತಾ ಠೇವಣಿ ನೀಡಲು ಒಪ್ಪಿರುತ್ತೇನೆ.

6) ಪಶುಆಹಾರ ಎತ್ತುವಳಿ ಮಾಡಲು ವಾಹನವು ಪಶುಆಹಾರ ಕಾರ್ಖಾನೆಯಲ್ಲಿ ತಂಗಿದ ಬಾಬ್ತುಗೆ ಅಥವಾ ಕಾಯ್ದ ಬಾಬ್ತಿಗೆ (Halting and waiting charges) ಯಾವುದೇ ಮೊತ್ತ ನೀಡಲಾಗುವುದಿಲ್ಲ.

**ಟೆಂಡರ್‌ದಾರರ ಸಹಿ ಮತ್ತು ಹೆಸರು**

(ದಪ್ಪ ಅಕ್ಷರಗಳಲ್ಲಿ)

# ಅನುಬಂಧ – ಡಿ

**1.0 ಗುತ್ತಿಗೆ ನಿಯಮ ನಿಬಂಧನೆಗಳು :**

ಕಹಾಮದ ಪಶುಆಹಾರ ಕಾರ್ಖಾನೆ ಶಿಕಾರಿಪುರ/ಗುಬ್ಬಿ ಪಶುಆಹಾರ ಸಾಗಾಣಿಕೆ ಗುತ್ತಿಗೆದಾರರು/ಸಾಗಾಣಿಕೆದಾರರು ಅವರಿಗೆ ಈ ಉದ್ದೇಶದಿಂದ ಒಪ್ಪಿಸಿರುವ ನಿಗದಿತ ಮಾರ್ಗಗಳಲ್ಲಿ ಪಶುಆಹಾರವನ್ನು ಎತ್ತುವಳಿ ಮಾಡಿ ಒಕ್ಕೂಟದಿಂದ ನೀಡಿದ ವೇಳಾಪಟ್ಟಿಯಂತೆ ಸಂಗ್ರಹಣೆ/ಸಾಗಾಣಿಕೆ ಮಾಡತಕ್ಕದ್ದು.

1. ಅ) ಪಶುಆಹಾರವನ್ನು ಲೋಡ್ ಮಾಡುವ ಮುನ್ನ ಸಂದರ್ಭದಲ್ಲಿ ಗುತ್ತಿಗೆದಾರರು ಅಥವಾ ಗುತ್ತಿಗೆದಾರ ಅಧಿಕೃತವಾಗಿ ನೇಮಿಸಿಕೊಳ್ಳುವ ಪ್ರತಿನಿಧಿಗಳು, ಪಶುಅಹಾರದ ತೂಕ ಮತ್ತು ಪ್ರಮಾಣವನ್ನು ಖುದ್ದಾಗಿ ಪರೀಕ್ಷಿಸಿ ದಾಖಲು ಮಾಡಿಕೊಂಡು ಪಶುಆಹಾರ ಕಾರ್ಖಾನೆಯಿಂದ ನೀಡುವ ಡೆಲವರಿ/ಗೇಟ್‌ಪಾಸ್/ಇನ್‌ವಾಯ್ಸ್/ಈವೇ ಬಿಲ್‌ನೊಂದಿಗೆ ತಾಳೆ ಮಾಡಿಕೊಳ್ಳುವುದು.

ಆ) ಪಶುಆಹಾರ ಕಾರ್ಖನೆಯಿಂದ ಪಶುಆಹಾರವನ್ನು ಡೇರಿ/ಶೀತಲೀಕರಣ ಕೇಂದ್ರದ ಉಗ್ರಾಣಕ್ಕೆ ಸಾಗಾಣಿಕೆ ಮಾಡಿ ಅನ್‌ಲೋಡ್ ಮಾಡಿದ ನಂತರ ಡೈರಿಯ ಹೊರಗೆ ಹೋಗಲು ಸಂಬಂಧಿಸಿದ ವಿಭಾಗದಿಂದ ಅಧಿಕೃತ ಸ್ವೀಕೃತಿ ಪತ್ರ ಮತ್ತು ಅನುಮತಿ (out pass) ಪಡೆಯತಕ್ಕದ್ದು.

2. ದರಪಟ್ಟಿ , ದಸ್ತಾವೇಜು, ಅಂಗೀಕಾರ ಆದ ಮೇಲೆ ಗುತ್ತಿಗೆದಾರರು ಆಧಾರದ ಮೊತ್ತವಾಗಿ ಭದ್ರತಾ ಠೇವಣಿಯನ್ನು ಆಯಾ ಮಾರ್ಗಗಳಿಗೆ ಸೂಚಿಸಿರುವಂತೆ ಪಾವತಿಸತಕ್ಕದ್ದು. ಈ ರೀತಿಯ ಆಧಾರ ಮೊತ್ತವನ್ನು ಸಂಸ್ಥೆಯಲ್ಲಿ ಜಂಟಿ ಎಫ್.ಡಿ. ಖಾತೆಯಲ್ಲಿ ಇರಿಸತಕ್ಕದ್ದು ಮತ್ತು ಈ ಮೊತ್ತಕ್ಕೆ ಬಡ್ಡಿ ನೀಡಲಾಗುವುದಿಲ್ಲ. ಗುತ್ತಿಗೆ ಅವಧಿ ಮುಕ್ತಾಯದ ನಂತರ ಸಂಸ್ಥೆಗೆ ಯಾವುದೇ ಬಾಕಿ ಇಲ್ಲವೆಂದು ದೃಢಪಟ್ಟನಂತರ ಈ ಹಣವನ್ನು ಹಿಂತಿರುಗಿಸಲಾಗುವುದು. ಗುತ್ತಿಗೆದಾರರು ತಮ್ಮ ಕರ್ತವ್ಯದಿಂದ ವಿಮುಖನಾದರೆ ಅಂತಹವರು ಒಕ್ಕೂಟದಲ್ಲಿ ಇಟ್ಟಿರುವ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

3. ಗುತ್ತಿಗೆದಾರ ತನಗೆ ದತ್ತವಾದ ಗುತ್ತಿಗೆಯನ್ನು ಮತ್ತೊಬ್ಬರಿಗೆ ವರ್ಗಾಯಿಸಲು ಅವಕಾಶವಿರುವುದಿಲ್ಲ. ಆದರೂ ಸಹ ಅನಿವಾರ್ಯ ಸಂದರ್ಭದಲ್ಲಿ ಆದೇಶ ಪಡೆದು ವಾಹನ ಓಡಿಸಿದ ಕನಿಷ್ಟ ಮೂರು ತಿಂಗಳ ನಂತರ ಟೆಂಡರ್‌ನಲ್ಲಿ ಪ್ರಕಟಿಸಿದಂತೆ ಕನಿಷ್ಠ 4 ವಾಹನಗಳನ್ನು ಹೊಂದಿರುವ ಗುತ್ತಿಗೆದಾರರಿಗೆ ನಿಯಾಮಾನುಸಾರ ವರ್ಗಾವಣೆ ಶುಲ್ಕ ರೂ.10,000/- ಪಾವತಿಸಿದಲ್ಲಿ ಒಂದು ಬಾರಿ ಮಾತ್ರ ವರ್ಗಾವಣೆ ಮಾಡಲಾಗುವುದು. ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾದದು.

4. ಶಿವಮೊಗ್ಗ ಹಾಲು ಒಕ್ಕೂಟವು ತನ್ನ ಅಂತಿಮ ಆದೇಶದಲ್ಲಿ ಸೂಚಿತ ದಿನಾಂಕದಿಂದು ಆರಂಭಗೊಂಡು ಒಂದು ವರ್ಷದ ಅವಧಿಗೆ ಸಾಗಾಣಿಕೆ ಕಾಮಗಾರಿಯನ್ನು ಕೈಗೊಳ್ಳತಕ್ಕದ್ದು. ಅಥವಾ ಡೇರಿಯು ತನ್ನ ವಿವೇಚನೆಗೆ ಸರಿಯೆಂದು ಕಂಡುಬಂದಲ್ಲಿ ಎಂಥದೇ ಸಂದರ್ಭದಲ್ಲಿ ಯಾವುದೇ ಕಾರಣ ನೀಡದೇ ಸಾಗಾಣಿಕೆ ಕಾಮಗಾರಿಯ ಅವಧಿಯನ್ನು ಕಡಿಮೆ ಅವಧಿಗೆ ನಿಗದಿಪಡಿಸಲು ಅಧಿಕಾರ ಉಳ್ಳದ್ದಾಗಿರುತ್ತದೆ.

5. ಸಾಗಾಣಿಕೆ ಕಾರ್ಯದಲ್ಲಿ ವಿಮುಖನಾದ ಗುತ್ತಿಗೆದಾರನನ್ನು ಅವಧಿಗೆ ಮುಂಚೆಯೇ ವಜಾ ಮಾಡಿದರೆ ಅಂತಹವನು ಇರಿಸಿರುವ ಇಡು ಹಣವನ್ನು ಭಾಗಶಃ ಅಥವಾ ಪೂರ್ಣ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಯಾವುದು ಸರಿಯೆಂದು ಶಿವಮೊಗ್ಗ ಹಾಲು ಒಕ್ಕೂಟವು ನಿರ್ಧರಿಸುತ್ತದೆ.

ಟೆಂಡರ್‌ದಾರರ ಸಹಿ ಮತ್ತು ಹೆಸರು
(ದಪ್ಪ ಅಕ್ಷರಗಳಲ್ಲಿ)

6. ಗುತ್ತಿಗೆದಾರರಿಗೆ ವಹಿಸಿರುವ ಸಾಗಾಣಿಕೆ ಮಾರ್ಗಗಳಲ್ಲಿ ಕೆಲವು ಗುತ್ತಿಗೆದಾರರ ಅಥವಾ ಎಲ್ಲಾ ಗುತ್ತಿಗೆದಾರರ ಸಾಗಾಣಿಕೆ ಮಾರ್ಗಗಳನ್ನು ಯಾವುದೇ ಕಾರಣ ನೀಡದೆ ಎಷ್ಟೇ ಅವಧಿಯವರೆಗೆ ಶಿವಮೊಗ್ಗ ಹಾಲು ಒಕ್ಕೂಟವು ತನ್ನ ವಿವೇಚನೆಗೆ ಸರಿಯೆಂದು ಕಂಡುಬಂದರೆ ಅಮಾನತುಗೊಳಿಸಬಹುದಾಗಿರುತ್ತದೆ.

7. ಗುತ್ತಿಗೆದಾರರಿಗೆ ವಹಿಸಿರುವ ಪಶುಆಹಾರ ಸಾಗಾಣಿಕೆ ಮಾರ್ಗಗಳಲ್ಲಿ ಕೆಲವು ಗುತ್ತಿಗೆದಾರರ ಅಥವಾ ಎಲ್ಲಾ ಗುತ್ತಿಗೆದಾರರ ಅಂಗೀಕಾರ ಪಡೆದ ಸಾಗಾಣಿಕೆ ಅವಧಿಯಲ್ಲಿ ಯಾವ ಸಮಯದಲ್ಲಿ ಬೇಕಾದರೂ ಅಮಾನತು ಆಜ್ಞೆಯನ್ನು ಶಿವಮೊಗ್ಗ ಹಾಲು ಒಕ್ಕೂಟ ಹಿಂದಕ್ಕೆ ಪಡೆಯಲು ಅಧಿಕಾರ ಉಳದ್ದಾಗಿರುತ್ತದೆ.

8. ಶಿವಮೊಗ್ಗ ಹಾಲು ಒಕ್ಕೂಟ ಸೂಚಿಸುವ ನಿರ್ದಿಷ್ಟ ದಿನಾಂಕದಿಂದ ಪಶುಆಹಾರ ಸಾಗಾಣಿಕಾ ಮಾರ್ಗದಲ್ಲಿ ಕೆಲವು ಅಥವಾ ಎಲ್ಲಾ ಮಾರ್ಗದಲ್ಲಿ ಶಿವಮೊಗ್ಗ ಹಾಲು ಒಕ್ಕೂಟವು ಸೂಚಿಸುವ ಗುತ್ತಿಗೆ ದರದನ್ವಯ ಸಾಗಾಣಿಕೆ ಕಾಮಗಾರಿಯನ್ನು ಪುನಾರಂಭಿಸಬಹುದಾಗಿರುತ್ತದೆ.

9. ಪಶುಆಹಾರ ಸಾಗಾಣಿಕೆ ಕಾಮಗಾರಿಯನ್ನು ಅಮಾನತುಗೊಳಿಸಿದ ಕಾರಣಕ್ಕಾಗಿ ಗುತ್ತಿಗೆದಾರರಿಗೆ ಪರಿಹಾರ ಧನವನ್ನು ನೀಡಲಾಗುವುದಿಲ್ಲ.

10. ಒಪ್ಪಂದವಾದ ಅರ್ಹ ಗುತ್ತಿಗೆ ಅವಧಿ ಮುಕ್ತಾಯವಾದ ಮೇಲೂ 3 ತಿಂಗಳಿಗೆ ಮೀರದಂತೆ ಹಾಗೂ ಅನಿವಾರ್ಯ ಸಂದರ್ಭಗಳಲ್ಲಿ ಪುನಃ ಇದನ್ನು ಮೂರು ತಿಂಗಳು (ಒಟ್ಟು ಆರು ತಿಂಗಳು) ಗುತ್ತಿಗೆ ಅವಧಿಯನ್ನು ವಿಸ್ತರಿಸಲು ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಅವಕಾಶವಿರುತ್ತದೆ. ವಿಸ್ತರಣಾ ಅವಧಿಗೆ ಕಾರ್ಯನಿರ್ವಹಿಸಲು ಸಾಗಾಣಿಕೆ ಗುತ್ತಿಗೆದಾರರು ಬದ್ಧರಾಗಿರಬೇಕು.

11. ಗುತ್ತಿಗೆದಾರ ತನ್ನ ಸ್ವಂತ ವಾಹನಗಳನ್ನು ಸಾಗಾಣಿಕೆ ಕಾಮಗಾರಿಗೆ ಓಡಿಸತಕ್ಕದ್ದು, ಹಾಗೂ ವಾಹನಕ್ಕೆ ಸಂಬಂಧಪಟ್ಟ ನೋಂದಣಿ, ನೋಂದಾವಣೆ ಪ್ರಮಾಣ ಪತ್ರ ತೆರಿಗೆ ಪಾವತಿ ರಶೀದಿ, ವಿಮಾ ಪ್ರಮಾಣ ಪತ್ರ ಹಾಗೂ ಇತರ ಎಲ್ಲಾ ಅಗತ್ಯ ಪ್ರಮಾಣ ಪತ್ರಗಳೂ, ಕಾಗದ ಪತ್ರಗಳ ಮೂಲ ಪ್ರತಿಯನ್ನು ಶಿವಮೊಗ್ಗ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರ ಸಮ್ಮುಖದಲ್ಲಿ ಹಾಜರು ಪಡಿಸಿ ಸ್ವಂತ ವಾಹನವೆಂದು ದೃಡಪಡಿಸಿ ಸಾಗಾಣಿಕೆ ಕಾಮಗಾರಿಯ ಗುತ್ತಿಗೆ ಕಾರ್ಯಕ್ಕೆ ಪ್ರವೇಶಿಸಬೇಕಾಗುತ್ತದೆ ಮಾರ್ಗದಲ್ಲಿ ಸಮರ್ಥವಾಗಿ ಓಡಬಲ್ಲದೆಂದು ಪಶುಆಹಾರವನ್ನು ಹಾಳಾಗದಂತೆ ಸಾಗಿಸಬಲ್ಲದೆಂದು ದೃಢಪಡಿಸಬೇಕಾಗುತ್ತದೆ. ಶಿವಮೊಗ್ಗ ಹಾಲು ಒಕ್ಕೂಟವು ಕೆಲ ವಾಹನಗಳು ಸಮರ್ಥವಲ್ಲವೆಂದು ಪರಿಗಣಿಸಿದರೆ ಅಂತಹ ವಾಹನಗಳನ್ನು ಬದಲಿಸುತ್ತೇನೆಂದು ಪ್ರಮಾಣಿಸಿದ ನಂತರ ಗುತ್ತಿಗೆ ಕಾರ್ಯ ಕೈಗೊಳ್ಳಬಹುದಾಗಿರುತ್ತದೆ.

12. ಪುರಸಭೆಯಿಂದ/ನಗರ ಸಭೆಯ ವತಿಯಿಂದ/ಆರೋಗ್ಯ ಇಲಾಖೆಯಿಂದ ಪಶು ಆಹಾರ ಪದಾರ್ಥಗಳನ್ನು ತನ್ನ ವಾಹನದಲ್ಲಿ ಸಾಗಾಣಿಕೆ ಮಾಡಬಹುದು ಎಂದು ಪುರಸಭೆಯಿಂದ/ನಗರ ಸಭೆಯ ಆರೋಗ್ಯ ಇಲಾಖೆಯಿಂದ ಅಗತ್ಯ ಅನುಮತಿ ಪತ್ರ ಪಡೆದಿರುವುದನ್ನು ಗುತ್ತಿಗೆದಾರರು ಹಾಜರುಪಡಿಸತಕ್ಕದ್ದು. (ಎಫ್.ಎಸ್.ಎಸ್.ಎ.ಐ ಲೈಸೆನ್ಸ್)

13. ಗುತ್ತಿಗೆ ವಾಹನಕ್ಕೆ ಸಂಬಂಧಿಸಿದಂತೆ ಗುತ್ತಿಗೆದಾರ ಈ ಕೆಳಗೆ ಸೂಚಿಸಿರುವ ಅಗತ್ಯಗಳನ್ನು ಹಾಗೂ ನಿರ್ದಿಷ್ಟ ಮಾಹಿತಿಗಳನ್ನು ಪೂರೈಕೆ ಮಾಡುತ್ತೇನೆ ಎಂದು ಒಪ್ಪಿಗೆ ಸೂಚಿಸತಕ್ಕದ್ದು.

13ಅ. ಗುತ್ತಿಗೆ ವಾಹನ, ಟಾರ್ಪಲ್ ಮುಚ್ಚಲು ಅವಕಾಶವಿರುವ ಸರಕು ಸಾಗಾಣಿಕೆ ವಾಹನ ಆಗಿರಬೇಕು.

13ಬಿ. ಅವಶ್ಯಕತೆ ಇದ್ದಾಗ ರಾತ್ರಿ ಅವಧಿಯಲ್ಲಿ ವಾಹನಕ್ಕೆ ಪಶುಆಹಾರ ಭರ್ತಿಮಾಡಲು ಹಾಗೂ ಇಳಿಸಲು ಅನುಕೂಲವಾಗುವಂತೆ ವಾಹನದ ಅಗತ್ಯ ಕಡೆಗಳಲ್ಲೆಲ್ಲಾ ಬೆಳಕಿನ ವ್ಯವಸ್ಥೆ ಮಾಡಿರತಕ್ಕದ್ದು.

ಟೆಂಡರ್‌ದಾರರ ಸಹಿ ಮತ್ತು ಹೆಸರು
(ದಪ್ಪ ಅಕ್ಷರಗಳಲ್ಲಿ)

13ಸಿ. ಪಶುಆಹಾರ ಸಾಗಾಣಿಕೆ ವಾಹನಕ್ಕೆ ಮಳೆಗಾಳಿಯಿಂದ ಮತ್ತು ಹವಾಮಾನ ವೈಪ್ಯರಿತ್ಯದಿಂದ ಪಶುಆಹಾರವು ಹಾಳಾಗದಂತೆ ಸಾಗಿಸಲು ಭದ್ರವಾದ ಟಾರ್ಪಲ್ ಮುಚ್ಚಿಗೆ ಇರತಕ್ಕದ್ದು. ಮತ್ತು ವಾಹನಕ್ಕೆ ಆರ್.ಟಿ.ಓ ಇಲಾಖೆಯವರು ಸೂಚಿಸುವ ಬಣ್ಣ ಬಳಸಿರಬೇಕು.

14. ಅನುಬಂಧ–ಸಿ ನಲ್ಲಿ ನಮೂದಿಸಿರುವಂತೆ ಅಗತ್ಯ ಸಾಮರ್ಥ್ಯದ ವಾಹನವನ್ನು ಒದಗಿಸಲು ಗುತ್ತಿಗೆದಾರ ಬದ್ಧರಾಗಿರಬೇಕು/ಒಪ್ಪಿಗೆಯನ್ನು ಸೂಚಿಸತಕ್ಕದ್ದು.

15. ವಾಹನಕ್ಕೆ ಪಶುಆಹಾರ ಭರ್ತಿ ಮಾಡಲು ಇಳಿಸಲು ಹಾಗೂ ಸಾಗಾಣಿಕೆ ಕಾರ್ಯಕ್ಕೆ ಅಗತ್ಯವಾದ ಕೆಲಸಗಾರರನ್ನು ಗುತ್ತಿಗೆದಾರರೇ ಸ್ವಂತವಾಗಿ ವ್ಯವಸ್ಥೆ ಮಾಡತಕ್ಕದ್ದು. ಚಾಲಕ ಹೊರತು ಪಡಿಸಿ ಪಶುಆಹಾರ ಲಾರಿಗೆ ಏರಿಸಲು/ಇಳಿಸಲು ಅನುಕೂಲವಾಗುವಂತೆ ಲೋಡರ್/ಅನ್‌ಲೋಡರ್‌ಗಳನ್ನು ಅವಶ್ಯಕತೆಗೆ ತಕ್ಕಂತೆ ಒದಗಿಸಬೇಕು. ಗುತ್ತಿಗೆ ಕಾರ್ಮಿಕರ ನಿಯಂತ್ರಣ ಹಾಗೂ ರದ್ದತಿ ವಿಧೇಯಕದ ನಿಯಮಕ್ಕೆ ಬದ್ಧನಾಗಿರಲು ಒಪ್ಪಿಗೆ ಸೂಚಿಸತಕ್ಕದ್ದು. ಕಾರ್ಮಿಕ ಕಾನೂನು/ನಿಯಮ ಉಲ್ಲಂಘಿಸಿದ ಕಾರಣದಿಂದಾಗಿ ಗುತ್ತಿಗೆ ಕಾರ್ಮಿಕ ಪರಿಹಾರ ಕೋರಿದರೆ ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಆಗುವ ನಷ್ಟವನ್ನು ಗುತ್ತಿಗೆದಾರ ಭರ್ತಿಮಾಡತಕ್ಕದ್ದು. ಸರ್ಕಾರ/ಶಿವಮೊಗ್ಗ ಹಾಲು ಒಕ್ಕೂಟವು ನಿಗದಿಪಡಿಸಿರುವ ಸಮವಸ್ತ್ರವನ್ನು ಚಾಲಕ ಹಾಗೂ ಲೋಡರ್‌ಗಳಿಗೆ ಗುತ್ತಿಗೆದಾರ ತನ್ನ ಸ್ವಂತ ಖರ್ಚಿನಲ್ಲಿ ಒದಗಿಸತಕ್ಕದ್ದು.

16. **ಕಾರ್ಮಿಕ ಕಾನೂನು ವರ್ಕ್ಸ್‌ಮೆನ್ಸ್ ಕಾಂಪನ್ಸೇಷನ್ ಆಕ್ಟ್ ಅಥವಾ ಇತರೇ ಶಾಸನ ಬದ್ಧ ಕಾಯಿದೆ, ಪಿ.ಎಫ್ ಮತ್ತು ಇ.ಎಸ್.ಐ ಗಳ ನಿಯಮ ನಿಬಂಧನೆಗಳ ಷರತ್ತುಗಳನ್ನು ಪಾಲಿಸಬೇಕಾದ ಜವಾಬ್ದಾರಿ ಗುತ್ತಿಗೆದಾರನ ಮೇಲೆ ಸಂಪೂರ್ಣವಾಗಿ ಇರುತ್ತದೆ. ಹಾಗೂ ಈ ಬಗ್ಗೆ ಯಾವುದೇ ನಷ್ಟ/ಜವಾಬ್ದಾರಿ ಹೊಣೆ ಗುತ್ತಿಗೆದಾರನದ್ದಾಗಿರುತ್ತದೆ.**

17. ಶಿವಮೊಗ್ಗ ಹಾಲು ಒಕ್ಕೂಟದ ಅಧಿಕಾರ ವರ್ಗ ಕಾಲಕಾಲಕ್ಕೆ ನೀಡುವ ಹಲವು ಸೂಚನೆಗಳನ್ನು ಎಚ್ಚರಿಕೆಯಿಂದ ಪಾಲಿಸತಕ್ಕದ್ದು. ಅದು ಪಶುಆಹಾರ ಮತ್ತು ಇತರೆ ಪಶು ಉತ್ಪನ್ನಗಳನ್ನು ಸುರಕ್ಷಿತವಾಗಿ ಸಾಗಾಣಿಕೆ ಮಾಡುವ ಕುರಿತಾದವುಗಳಾಗಿರಬಹುದು. ಅವುಗಳನ್ನು ನಜ್ಜು ಗುಜ್ಜು ಮಾಡದೇ, ಪಡೆದ ನಂತರ ಮುರಿದು ಹಾಕದೇ ಸುರಕ್ಷಿತವಾಗಿ ಬಳಸುವ ಕುರಿತಾಗಿರಬಹುದು.

18. ಸಂಘಗಳ/ಹಾಲು ಉತ್ಪಾದಕರ ಅನುಕೂಲಕ್ಕಾಗಿ ಕಾಲಕಾಲಕ್ಕೆ ಶಿವಮೊಗ್ಗ ಹಾಲು ಒಕ್ಕೂಟವು ಪಶುಆಹಾರ ಸಾಗಣಿಕೆ ಮಾರ್ಗದ ಸ್ಥಳಗಳನ್ನು ಬದಲಿಸಬಹುದಾಗಿರುತ್ತದೆ. ಈ ರೀತಿಯ ಬದಲಾವಣೆ ಕಾರಣಕ್ಕಾಗಿ ಮಾರ್ಗದಲ್ಲಿನ ಮಾರಾಟ ಕೇಂದ್ರದಿಂದ ಪಡೆಯಬಹುದಾದ ನಗದು/ತಃಖ್ತೆ ಕಾರಣದಿಂದಾಗಿ ಗುತ್ತಿಗೆದಾರ ಯಾವುದೇ ನಷ್ಟವನ್ನು ಭರಿಸುವಂತೆ ಕೋರಲು ಅವಕಾಶ ಇರುವುದಿಲ್ಲ.

19. ಪಶುಆಹಾರ ಉತ್ಪಾದನೆ ಕಡಿಮೆ/ಹೆಚ್ಚಾಗಿ ಒಟ್ಟು ಪಶುಆಹಾರ ವಿತರಣಾ ಪ್ರಮಾಣವು ವ್ಯತ್ಯಯಗೊಂಡರೂ ಗುತ್ತಿಗೆದಾರ ಸಾಗಾಣಿಕೆ ಕಾಮಗಾರಿಗೆ ತನ್ನ ಒಪ್ಪಿಗೆಯನ್ನು ಸೂಚಿಸತಕ್ಕದ್ದು.

20. ನಿಗಧಿಪಡಿಸಿರುವ ಸಾಗಾಣಿಕೆ ಮಾರ್ಗದಲ್ಲಿ ಓಡಾಡುವ ವಾಹನ ಚಲಿಸಲು ಸಾಧ್ಯವಾಗದೆ ಕೆಟ್ಟುನಿಂತರೆ ಬದಲಿ ವಾಹನವನ್ನು ಖಚಿತವಾಗಿ ವ್ಯವಸ್ಥೆ ಮಾಡಬೇಕಾದ ಹೊಣೆಗಾರಿಕೆ ಗುತ್ತಿಗೆದಾರನದ್ದಾಗಿರುತ್ತದೆ.

21. ಶಿವಮೊಗ್ಗ ಹಾಲು ಒಕ್ಕೂಟದ ನೌಕರ ವರ್ಗ, ಅಧಿಕೃತ ಪ್ರತಿನಿಧಿಗಳು, ಗುತ್ತಿಗೆದಾರನ ವಾಹನಗಳಲ್ಲಿ ಗುತ್ತಿಗೆದಾರನ ಸಿಬ್ಬಂದಿಯ ಜೊತೆಗೆ ಉಚಿತವಾಗಿ ಪ್ರಯಾಣಿಸಲು ಅನುಮತಿಯನ್ನು ಗುತ್ತಿಗೆದಾರ ನೀಡತಕ್ಕದ್ದು.

22. ಗುತ್ತಿಗೆ ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ ಶಿವಮೊಗ್ಗ ಹಾಲು ಒಕ್ಕೂಟದ ನೌಕರ ವರ್ಗ ಅಥವಾ ಗುತ್ತಿಗೆದಾರ ಸಾಗಾಣಿಕೆ ಹಾಗೂ ಭರ್ತಿಮಾಡಲು ಇಳಿಸಲು ನೇಮಿಸಿಕೊಂಡಿರುವ ಸಿಬ್ಬಂದಿಗಳನ್ನು ಹೊರತುಪಡಿಸಿ ಮತ್ತಾರನ್ನೂ ಈ ಕಾರ್ಯಕ್ಕೆ ನೇಮಕ ಆಗಿರುವ ವಾಹನಗಳಲ್ಲಿ ಸಂಚರಿಸಲು ಅವಕಾಶ ನೀಡತಕ್ಕದ್ದಲ್ಲ.

ಟೆಂಡರ್‌ದಾರರ ಸಹಿ ಮತ್ತು ಹೆಸರು
(ದಪ್ಪ ಅಕ್ಷರಗಳಲ್ಲಿ)

23. ಸಾಗಾಣಿಕೆಗೆ ಅನುಮತಿ ನೀಡಿರುವ ಸಾಮಾಗ್ರಿಗಳನ್ನಲ್ಲದೆ ಮತ್ತಾವುದೇ ಸಾಮಾಗ್ರಿಗಳನ್ನು ಈ ವಾಹನದಲ್ಲಿ ಸಾಗಿಸತಕ್ಕದ್ದಲ್ಲ.

24. ಸಾಗಾಣಿಕೆ ವೆಚ್ಚ ಈ ಕೆಳಕಂಡ ವಿಷಯಕ್ಕೆ ಹೊರತುಪಡಿಸಿ ಬೇರೆ ಯಾವುದೇ ಕಾರಣಕ್ಕೆ ಏರಿಕೆ ಸಾಧ್ಯವಿಲ್ಲ. ಐ.ಓ.ಸಿ., ಜಿ.ಒ.ಕೆ., ಡೀಸೆಲ್‌ನ ಪ್ರತಿ ಲೀಟರ್‌ನ ಬೆಲೆಯಲ್ಲಿ ಹೆಚ್ಚಳ ಮಾಡುವ ಪರಿಮಾಣವನ್ನು ವಿವಿಧ ಸಾಮರ್ಥ್ಯದ ವಾಹನಗಳಿಗನುಗುಣವಾಗಿ ಹೆಚ್ಚಳದ ಅಥವಾ ಇಳಿಕೆಯ ಪ್ರಮಾಣ ಪ್ರತಿ ಲೀಟರ್‌ಗೆ ಸರಾಸರಿ ನೀಡುವ ಮೈಲೇಜ್ ಈ ಕೆಳಗಿನಂತಿರುತ್ತದೆ.

**ಅ) 10 ಎಂ.ಟಿ. ಸರಕು ಸಾಗಾಣಿಕೆ ವಾಹನಕ್ಕೆ : 04 ಕಿ.ಮೀ. ಪ್ರತಿ ಲೀ ಡೀಸೆಲ್‌ಗೆ**

ಆ) ಡೀಸೆಲ್ ದರದಲ್ಲಿನ ಇಳಿಮುಖ ನಿರಂತರವಾಗಿ ನೀಡುತ್ತಿರುವ ಸಾಗಾಣಿಕೆ ದರದಲ್ಲಿನ ಇಳಿಕೆಗೆ ಕಾರಣವಾಗಿರುತ್ತದೆ. ಪಶುಆಹಾರ ಸಾಗಾಣಿಕೆ ವಾಹನಗಳಿಗೆ ಡೀಸೆಲ್ ದರ ಏರಿಕೆ/ಇಳಿಕೆಯಾದಲ್ಲಿ ವಾಹನಗಳು ಸಾಗಾಣಿಕೆಗೆ ಕ್ರಮಿಸುವ ಅಂದಾಜು ಕಿ.ಮೀ. ಆಧಾರದ ಮೇಲೆ ಡೀಸೆಲ್ ದರವನ್ನು ಪರಿಗಣಿಸಿ ಸಾಗಾಣಿಕೆ ದರ ಪರಿಷ್ಕರಿಸಲಾಗುವುದು.

25. ಶಿವಮೊಗ್ಗ ಹಾಲು ಒಕ್ಕೂಟವು ನಿರ್ದಿಷ್ಟಪಡಿಸಿದ ವೇಳೆಯಲ್ಲಿ, ಗುತ್ತಿಗೆದಾರ ವಾಹನಗಳನ್ನು ಪೂರೈಸತಕ್ಕದ್ದು. ಗುತ್ತಿಗೆದಾರನಿಗೆ ಅಲ್ಪಕಾಲೀನ ಸೂಚನೆ ನೀಡಿ ವೇಳೆ ಬದಲಿಸುವ ಹಕ್ಕು ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಇರುತ್ತದೆ.

26. ಗಲಭೆಗಳಿಂದಾಗಿ ನಾಗರೀಕರ ಪ್ರತಿಭಟನೆ, ಕಾರ್ಮಿಕರ ಮುಷ್ಕರ/ಹೋರಾಟದಿಂದಾಗಿ ಅಥವಾ ಬಂದ್ ಸಮಯದಲ್ಲಿ, ಗುತ್ತಿಗೆದಾರನ ವಾಹನ ಜಖಂಗೊಂಡರೆ ಗುತ್ತಿಗೆದಾರ ಪರಿಹಾರ ಕೇಳುವ ಹಾಗಿಲ್ಲ. ಸಂಸ್ಥೆಯ ಒಳ ಆವರಣದಲ್ಲಿ ಅಥವಾ ಹೊರ ಆವರಣದಲ್ಲಿ ಹೊರಗಿನವರಿಂದಾಗಲೀ ಜಖಂ ಆಗಬಹುದು.

27. ಈ ಗುತ್ತಿಗೆಯಲ್ಲಿ ಗುತ್ತಿಗೆದಾರ ಅರಿತಿರಬೇಕಾದುದು ನಿರಂತರವಾಗಿ ಯಾವುದೇ ಅಡೆತಡೆ ಇಲ್ಲದೆ ಸಾಗಾಣಿಕೆ ಮಾಡುತ್ತಿರಬೇಕು. ಕಾನೂನು ಸುವ್ಯವಸ್ಥೆಯ ಸಂದರ್ಭದಲ್ಲಾಗಲೀ, ಹವಾಮಾನ ವೈಪರೀತ್ಯದಿಂದಾಗಲೀ ಸರಬರಾಜಿನಲ್ಲಿ ಪಶುಆಹಾರವು ವ್ಯತ್ಯಯವಾಗದಂತೆ ನಿಗದಿಪಡಿಸಿರುವ ಎಲ್ಲಾ ಮಾರ್ಗಗಳಲ್ಲಿ ನಿರಂತರವಾಗಿ ಸಾಗಾಣಿಕೆ ಆಗುತ್ತಿರಬೇಕು.

28. ಮಿಲಿಟರಿ ಹಾಗೂ ನಾಗರೀಕ ಅಧಿಕಾರವು ಕರ್ಫ್ಯೂ ವಿಧಿಸಿರುವ ಸಂದರ್ಭದಲ್ಲಿ ಯಾವುದೇ ನಿರ್ಬಂಧ ಹಾಕಿರುವ ಸಂದರ್ಭದಲ್ಲಿ ವಾಹನ ಓಡಾಟಕ್ಕೆ ನಿರ್ಬಂಧವನ್ನು ಹೊರಿಸಿರುವ ಸಂದರ್ಭದಲ್ಲಿ ಶಿವಮೊಗ್ಗ ಹಾಲು ಒಕ್ಕೂಟವು ಯಾರಿಂದ ವಾಹನ ಓಡಾಟಕ್ಕೆ ಅನುಮತಿ ಪಡೆಯಬೇಕೋ ಅಂತ ಅಧಿಕೃತ ಅಧಿಕಾರಿಗಳಿಂದ ಅನುಮತಿ ಪಡೆದು ವಾಹನ ಹಾಗೂ ಸಿಬ್ಬಂದಿಯ ಚಲನವಲನಕ್ಕೆ ಅವಕಾಶ ಕಲ್ಪಿಸಿಕೊಡುತ್ತದೆ.

29. ಗುತ್ತಿಗೆದಾರನ ನೌಕರ, ಪ್ರತಿನಿಧಿ ಸಾಗಾಣಿಕೆಗೆ ನೀಡಿರುವ ಪಶುಆಹಾರ ಮತ್ತು ಪಶು ಉತ್ಪನ್ನವನ್ನು ಇತರೇ ವಸ್ತುಗಳನ್ನು ಕದಿಯುತ್ತಿದ್ದರೆ ಮತ್ತು ಹಾಳು ಮಾಡುತ್ತಿದ್ದರೆ ಅದು ಸಾಗಾಣಿಕೆ ಸಂದರ್ಭದಲ್ಲಿ ಭರ್ತಿಮಾಡುವ, ಇಳಿಸುವ ಸಂದರ್ಭದಲ್ಲಿ ಶಿವಮೊಗ್ಗ ಹಾಲು ಒಕ್ಕೂಟದ ಆವರಣದಲ್ಲಿಯೇ ಅಥವಾ ವಿತರಣಾ ಕೇಂದ್ರಗಳಲ್ಲಿ ಆಗುತ್ತಿದ್ದರೆ ಇದರಿಂದಾಗುವ ನಷ್ಟ ಹಾಗೂ ಹಾಳಾಗುವುದಕ್ಕೆ ಗುತ್ತಿಗೆದಾರನೇ ಹೊಣೆಯಾಗುತ್ತಾನೆ. ಹಾಗೂ ಆದ ನಷ್ಟವನ್ನು ಗುತ್ತಿಗೆದಾರ ಭರಿಸತಕ್ಕದ್ದು, ಇಲ್ಲವೇ ಶಿವಮೊಗ್ಗ ಹಾಲು ಒಕ್ಕೂಟ ತನ್ನ ವಿವೇಚನೆಗೆ ಸರಿಕಂಡುಬಂದರೆ ಗುತ್ತಿಗೆದಾರ ಇರಿಸಿರುವ ಇಡು ಹಣವನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಅಥವಾ ಗುತ್ತಿಗೆಯನ್ನೇ ವಜಾ ಮಾಡಬಹುದಾಗಿರುತ್ತದೆ ಅಥವಾ ಸೂಕ್ತ ದಂಡ ವಿಧಿಸಲಾಗುವುದು.

30. ಗುತ್ತಿಗೆದಾರನ ನೌಕರ/ಪ್ರತಿನಿಧಿ ಶಿವಮೊಗ್ಗ ಹಾಲು ಒಕ್ಕೂಟದ ಅಧಿಕಾರಿಗಳೊಂದಿಗೆ/ಸಂಘದ ಸಿಬ್ಬಂದಿಗಳೊಂದಿಗೆ ಅಥವಾ ಸಾರ್ವಜನಿಕರೊಂದಿಗೆ ತಪ್ಪಾಗಿ ನಡೆದುಕೊಂಡರೆ ಅಕ್ರಮ ವ್ಯವಹಾರಗಳಲ್ಲಿ ತೊಡಗಿದರೆ ಅಂತಹ ನೌಕರನನ್ನು ಸಾಗಾಣಿಕೆ ಕಾರ್ಯದಿಂದ ತೆಗೆದುಹಾಕಿ ಎಂದು ಶಿವಮೊಗ್ಗ ಹಾಲು ಒಕ್ಕೂಟವು ಸೂಚಿಸಬಹುದು. ಹಾಗೆ ಸೂಚಿಸಿದಾಗ ಗುತ್ತಿಗೆದಾರ ಅಂತಹ ಅನಪೇಕ್ಷಿತ ವ್ಯಕ್ತಿಯನ್ನು ಕೂಡಲೇ ಕೆಲಸದಿಂದ ತೆಗೆದುಹಾಕಬೇಕು. ಅವನನ್ನು ಶಿವಮೊಗ್ಗ ಹಾಲು ಒಕ್ಕೂಟದ ಇದೇ ಗುತ್ತಿಗೆದಾರರನಾಗಲೀ, ಇತರೇ ಗುತ್ತಿಗೆದಾರನಾಗಲೀ ಮತ್ತೆ ಕೆಲಸಕ್ಕೆ ನೇಮಕ ಮಾಡಿಕೊಳ್ಳಬಾರದು.

ಟೆಂಡರ್‌ದಾರರ ಸಹಿ ಮತ್ತು ಹೆಸರು
(ದಪ್ಪ ಅಕ್ಷರಗಳಲ್ಲಿ)

31. ನಿರ್ದಿಷ್ಟಪಡಿಸಿದ ವೇಳೆಯಲ್ಲಿ ಗುತ್ತಿಗೆದಾರ ಪಶುಆಹಾರ ಸಾಗಾಣಿಕೆ ಮಾಡುವಲ್ಲಿ ವಿಫಲನಾದರೆ ಇದರಿಂದಾಗಿ ಪಶುಆಹಾರ ಹಾಳಾಗುವ ಸಂಭವವಿರುತ್ತದೆ. ಆದ್ದರಿಂದ ಗುತ್ತಿಗೆದಾರರು ತಮಗೆ ವಹಿಸಿದ ಜವಾಬ್ದಾರಿಯನ್ನು ಸಮಯಕ್ಕೆ ಸರಿಯಾಗಿ ನಿಭಾಯಿಸತಕ್ಕದ್ದು.

32. ಗುತ್ತಿಗೆದಾರನ ವಾಹನ ಸಾಗಾಣಿಕೆ ಕಾರ್ಯಕ್ಕೆ ಶಿವಮೊಗ್ಗ ಹಾಲು ಒಕ್ಕೂಟದ ಆವರಣಕ್ಕೆ ಪ್ರವೇಶಿಸುವ, ನಿರ್ಗಮಿಸುವ, ಓಡಾಡುವ ಸಂದರ್ಭದಲ್ಲಿ ಶಿವಮೊಗ್ಗ ಹಾಲು ಒಕ್ಕೂಟದ ಕಟ್ಟಡದ ಆಸ್ತಿಗೆ ಹಾನಿಯಾಗದಂತೆ ಎಚ್ಚರವಹಿಸತಕ್ಕದ್ದು. ಹಾಗಲ್ಲದೆ ನಷ್ಟ ಉಂಟುಮಾಡಿದರೆ, ನಷ್ಟದ ಮೊತ್ತವನ್ನು ಅವರ ಬಿಲ್ಲಿನಲ್ಲಿ ಕಡಿತಮಾಡಿ ಅಥವಾ ಇತರ ಅಗತ್ಯ ಕ್ರಮದಿಂದ ವಸೂಲು ಮಾಡಲಾಗುವುದು.

33. ಗುತ್ತಿಗೆದಾರನ ವಾಹನ ಡೇರಿಯ ಆವರಣದಲ್ಲಿ ಅಥವಾ ಹೊರಗಡೆ ಅಪಘಾತಕ್ಕೆ ಗುರಿಯಾದರೆ ಆ ನಷ್ಟವನ್ನು ಶಿವಮೊಗ್ಗ ಹಾಲು ಒಕ್ಕೂಟದಿಂದ ಪರಿಹಾರವಾಗಿ ಪಡೆಯತಕ್ಕದ್ದಲ್ಲ. ಗುತ್ತಿಗೆದಾರ ಗುತ್ತಿಗೆ ಅವಧಿ/ಹೆಚ್ಚುವರಿ ಅವಧಿಯಲ್ಲಿ ಸಾಗಾಣಿಕೆ ಮಾಡುವ ಸರಕಿನ ಮೌಲ್ಯಕ್ಕೆ ವಿಮೆ ಮಾಡಿಸಿರಬೇಕು.

34. ಗುತ್ತಿಗೆದಾರನ ವಾಹನ ಶಿವಮೊಗ್ಗ ಹಾಲು ಒಕ್ಕೂಟದ ಆವರಣಕ್ಕೆ ಬರುವ ಹಾಗು ಹೊರ ಹೋಗುವ ಇಲ್ಲವೇ ಆವರಣದಲ್ಲಿರುವ ಅನುಮತಿಯುಳ್ಳ ವ್ಯಕ್ತಿಯನ್ನು ಗಾಯಗೊಳಿಸುವುದು ಅಥವಾ ಸಾವಿಗೆ ಕಾರಣವಾಗದಂತೆ ಎಚ್ಚರಿಕೆ ವಹಿಸತಕ್ಕದ್ದು.

35. ಶಿವಮೊಗ್ಗ ಹಾಲು ಒಕ್ಕೂಟದ ಸಿಬ್ಬಂದಿಗೆ/ ಅನುಮತಿಯುಳ್ಳ ವ್ಯಕ್ತಿಗೆ ಉಂಟಾಗಬಹುದಾದ ಗಾಯ, ಅದರಿಂದ ಡೇರಿಯ ನೌಕರರ ಪರಿಹಾರ ನೀಡಿಕೆ ನಿಯಮದಡಿ ಇತರೆ ಯಾವುದೇ ಕಾನೂನಿನಡಿ ಜಾರಿಯಲ್ಲಿರುವ ನಿಬಂಧನೆ ಅಧಿನಿಯಮದಡಿ ಪರಿಹಾರ ಧನವನ್ನು ಗುತ್ತಿಗೆದಾರ ಭರಿಸತಕ್ಕದ್ದು.

36. ಈ ಗುತ್ತಿಗೆಯಡಿ ತನಗೆ ದತ್ತವಾಗಿರುವ ಹಕ್ಕು ಬಾಧ್ಯತೆಯನ್ನು ಇತರ ವ್ಯಕ್ತಿಗೆ ವಹಿಸಿಕೊಡತಕ್ಕದ್ದಲ್ಲ.

37. ಈ ಗುತ್ತಿಗೆಯಡಿ ಆತನಿಗೆ ವಹಿಸಿರುವ ಸಾಗಾಣಿಕೆ ಕಾಮಗಾರಿಯನ್ನು ನಿರ್ವಹಿಸಲು ವಿಫಲನಾದಲ್ಲಿ ಅಥವಾ ಸಾಗಾಣಿಕೆಯ ಪೂರ್ಣ ಕಾರ್ಯವನ್ನು ಕೈಗೊಳ್ಳದಿದ್ದಲ್ಲಿ ಅಥವಾ ಭಾಗಶಃ ನಿರ್ವಹಿಸದಿದ್ದಲ್ಲಿ ಶಿವಮೊಗ್ಗ ಹಾಲು ಒಕ್ಕೂಟವು ವಿಧಿಸಿರುವ ನಿಯಮ ನಿಬಂಧನೆಯಡಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳಬಹುದಾಗಿದೆ.

ಎ) ಗುತ್ತಿಗೆಯನ್ನು ವಜಾ ಮಾಡಬಹುದು ಅಥವಾ ಯಾವುದೇ ಭಾಗದ ಕಾರ್ಯವನ್ನು ಅಥವಾ

ಬಿ) ಆಧಾರ ಮೊತ್ತವನ್ನು ಪೂರ್ಣ ಮುಟ್ಟುಗೋಲು ಅಥವಾ ಶಿವಮೊಗ್ಗ ಹಾಲು ಒಕ್ಕೂಟ ದಿಂದ ಉಂಟಾದ ನಷ್ಟದ ಪ್ರಮಾಣಕ್ಕೆ ಸರಿದೂಗಿಸುವಷ್ಟು ಹಾಗೂ ಅಥವಾ

ಸಿ) ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಉಂಟಾದ ನಷ್ಟದ ಪ್ರಮಾಣವನ್ನು ಪಾವತಿಸುವಂತೆ ಗುತ್ತಿಗೆದಾರರಿಗೆ ಸೂಚಿಸುವುದು.

ಡಿ) ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಉಂಟಾದ ನಷ್ಟವನ್ನು ಗುತ್ತಿಗೆದಾರರು ಬೇರೆ ಮಾರ್ಗದಲ್ಲಿ ವಾಹನ ಒದಗಿಸಿದ್ದರೆ ಅದರಿಂದ ಸರಿದೂಗಿಸಿಕೊಳ್ಳಲಾಗುವುದು.

ಡಿ) ಈ ಕಾರಣದಿಂದಾಗಿ ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಉಂಟಾದ ಹೆಚ್ಚುವರಿ ವೆಚ್ಚವನ್ನು ಹಾಗೂ ಇಂತಹ ಸೇವೆಯನ್ನು ಇತರರಿಂದ ಪಡೆದುದಕ್ಕಾಗಿ ಆದ ಹೆಚ್ಚುವರಿ ವೆಚ್ಚದ ಮೊತ್ತವನ್ನು ಗುತ್ತಿಗೆದಾರನಿಂದ ಪಡೆಯತಕ್ಕದ್ದು.

38. ಪಶುಆಹಾರ ಲಾರಿಗೆ ಏರಿಸಿದ ನಂತರ/ಇಳಿಸಿದ ನಂತರ ಪಶುಆಹಾರ ಚೀಲಗಳು ಬಿದ್ದು ಹಾಳಾಗದಂತೆ ಟಾರ್ಪಲ್‌ನ್ನು ಬಿಗಿಯಾಗಿ ಹಾಕಿಕೊಳ್ಳತಕ್ಕದ್ದು ತಪ್ಪಿದ್ದಲ್ಲಿ ಹಾಳಾದ ಪಶುಆಹಾರ ಚೀಲಗಳ ನಷ್ಟಕ್ಕೆ ಗುತ್ತಿಗೆದಾರರನ್ನೆ ಹೊಣೆಗಾರರನ್ನಾಗಿ ಮಾಡಲಾಗುವುದು. ಈ ರೀತಿಯ ನಷ್ಟದ ಮೊತ್ತವನ್ನು ಗುತ್ತಿಗೆದಾರರ ಸಾಗಾಣಿಕೆ ಬಿಲ್ಲಿನಲ್ಲಿ/ಭದ್ರತಾ ಠೇವಣಿಯಲ್ಲಿ ವಸೂಲಿ ಮಾಡಲು ಕ್ರಮಕೈಗೊಳ್ಳುವುದು.

ಟೆಂಡರ್‌ದಾರರ ಸಹಿ ಮತ್ತು ಹೆಸರು
(ದಪ್ಪ ಅಕ್ಷರಗಳಲ್ಲಿ)

39. ಗುತ್ತಿಗೆದಾರರು ಗುತ್ತಿಗೆ ಅವಧಿಯಲ್ಲಿ ಅಕಾಲ ಮರಣಹೊಂದಿದಲ್ಲಿ ಸಾಗಾಣಿಕೆ ಗುತ್ತಿಗೆಯನ್ನು ಅವರ ಕಾನೂನು ಬದ್ಧ ವಾರಸುದಾರರಿಗೆ ಮುಂದುವರೆಸುವ ಅಥವಾ ನೀಡದಿರುವ ಹಕ್ಕು ವ್ಯವಸ್ಥಾಪಕ ನಿರ್ದೇಶಕರಿಗೆ ಕಾಯ್ದಿರಿಸಲಾಗಿದೆ. ಹಾಗು ಅಂತಹ ಸಂದರ್ಭಗಳಲ್ಲಿ ಅವರಿಗೆ ಡೇರಿಯ ವತಿಯಿಂದ ಪಾವತಿಸುವ ಹಣವೇನಾದರೂ ಇದ್ದಲ್ಲಿ ಇದನ್ನು ಕಾನೂನು ರೀತಿ ನಿಯಮಾನುಸಾರ ಪರಿಶೀಲಿಸಿ ಬಿಡುಗಡೆಗೊಳಿಸುವ ಅಧಿಕಾರವು ವ್ಯವಸ್ಥಾಪಕ ನಿರ್ದೇಶಕರು ಶಿವಮೊಗ್ಗ ಹಾಲು ಒಕ್ಕೂಟದ ವಿವೇಚನೆಗೆ ಒಳಪಟ್ಟಿರುತ್ತದೆ.

40. ಗುತ್ತಿಗೆದಾರರು ಗುತ್ತಿಗೆ ಅವಧಿಯಲ್ಲಿ ಯಾವುದೇ ಅಪರಾಧ / ಕಾನೂನು ಉಲ್ಲಂಘನೆಗಳಲ್ಲಿ ಭಾಗಿಯಾಗಿರುವುದು ಕಂಡು ಬಂದಲ್ಲಿ ಇಂತವರ ಮೇಲೆ ಆರಕ್ಷಕ ಠಾಣೆ / ನ್ಯಾಯಾಲಯದಲ್ಲಿ ಮೊಕದ್ದಮೆಗಳೇನಾದರೂ ಇರುವುದು ಕಂಡುಬಂದಲ್ಲಿ ಇಂತಹ ಗುತ್ತಿಗೆದಾರರ ಗುತ್ತಿಗೆಯನ್ನು ಯಾವುದೇ ಮುನ್ಸೂಚನೆ ನೀಡದೆ ರದ್ದುಪಡಿಸುವ ಅಧಿಕಾರವು ವ್ಯವಸ್ಥಾಪಕ ನಿರ್ದೇಶಕರು ಶಿವಮೊಗ್ಗ ಹಾಲು ಒಕ್ಕೂಟ ಕಾಯ್ದಿರಿಸಲಾಗಿದೆ. ಮತ್ತು ಅಂತಹವರ ಇಡುಗಂಟನ್ನು (ಭದ್ರತಾ ಠೇವಣಿ)ಸಹ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

41. ಗುತ್ತಿಗೆಯ ವಾಹನ ಚಾಲಕರು/ಸಿಬ್ಬಂದಿಗಳು ಡೇರಿಯ ಆವರಣದೊಳಗಡೆ ಟೇಪ್‌ರಿಕಾರ್ಡರ್ / ಐ ಪಾಡ್ /ಹಾರ್ನ್ / ಮೊಬೈಲ್, ದೂರವಾಣಿ / ತಂಬಾಕು ವಗ್ಯೆರೆ ಉಪಯೋಗಿಸುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಈ ನಿಯಮಗಳನ್ನು ಉಲ್ಲಂಘಿಸುವುದು ಕಂಡು ಬಂದಲ್ಲಿ ಸೂಕ್ತ ದಂಡ ವಿಧಿಸಲಾಗುವುದಲ್ಲದೆ ಡೇರಿಯ ನಿಯಮಗಳಂತೆ ಕ್ರಮ ಜರುಗಿಸಲಾಗುವುದು.

42. ದಿನನಿತ್ಯದ ವಾಹನ ಕೆಟ್ಟು ನಿಂತಾಗ ಅಪಘಾತ ಆದಾಗ ಇತರೆ ಅನಿರೀಕ್ಷಿತ ಸಂದರ್ಭ ಒದಗಿ ಬಂದಾಗ ಬದಲಿ ವಾಹನವನ್ನು ಗುತ್ತಿಗೆದಾರ ಒದಗಿಸಿದಾಗ, 42 ರ ನಿಯಮದಡಿ ಹಾಗೂ ಉಪನಿಯಮ 1,2,3 ರ ಅಡಿಯಲ್ಲಿ ದಂಡವನ್ನು ವಿಧಿಸಲಾಗುವುದಿಲ್ಲ. ಬದಲಿ ವಾಹನವನ್ನು ಒದಗಿಸಿದ್ದರೂ ಉಳಿದ ಉಪನಿಬಂಧನೆ 4 ರಿಂದ 8 ರ ಅಡಿಯಲ್ಲಿ ಕ್ರಮ ಜರುಗಿಸಲಾಗುವುದು.

43. ಗುತ್ತಿಗೆ ಅವಧಿಯಲ್ಲಿ ಪಶುಆಹಾರ ಸಾಗಾಣಿಕೆ ಕಾರ್ಯಕ್ಕೆ ಯಾವುದೇ ದಿನ ವಾಹನವನ್ನು ಒದಗಿಸುವಲ್ಲಿ ವಿಫಲವಾದರೆ, ಶಿವಮೊಗ್ಗ ಹಾಲು ಒಕ್ಕೂಟವು ಅಂದಿನ ಕಾರ್ಯಕ್ಕೆ ಮಾಡಿದ ಸಾರಿಗೆ ವೆಚ್ಚ ಹಾಗೂ ಪ್ರತಿ ಟ್ರಿಪ್‌ಗೆ ತಲಾ ರೂ. 1000.00 ರಂತೆ ದಂಡ ವಿಧಿಸಲಾಗುವುದು. ಮತ್ತು ಒಕ್ಕೂಟದಿಂದ ಪರ್ಯಾಯ ವ್ಯವಸ್ಥೆ ಮಾಡಿ ಸಾಗಾಣಿಕೆ/ಸರಬರಾಜಿಗೆ ಕ್ರಮವಿಡಲಾಗುವುದು.

44. ಗುತ್ತಿಗೆದಾರರ ವಾಹನಗಳನ್ನು ಪರಿಶೋಧಿಸಿದಾಗ, ವಾಹನದಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳು, ಕ್ರೇಟುಗಳು, ಕ್ಯಾನುಗಳು ಅಥವಾ ಡೇರಿಗೆ ಸಂಬಂಧಿಸಿದ ವಸ್ತುಗಳು ಅನಧಿಕೃತವಾಗಿ ರವಾನೆಯಾಗುತ್ತಿದ್ದಲ್ಲಿ, ಅದನ್ನು ವಶಪಡಿಸಿಕೊಂಡು ದಂಡ ವಿಧಿಸಲಾಗುವುದು. ಇಂತಹ ತಪ್ಪುಗಳು ಪುನರಾವರ್ತನೆಯಾದಲ್ಲಿ ಹೆಚ್ಚಿನ ದಂಡ ವಿಧಿಸಲಾಗುವುದಲ್ಲದೆ ದಂಡದ ಜೊತೆಗೆ ಗುತ್ತಿಗೆಯನ್ನು ರದ್ದುಪಡಿಸಲಾಗುವುದು.

45. ಚಾಲಕನಿಗೆ /ಲೋಡರ್‌ಗಳಿಗೆ ಡೇರಿಯೊಳಗೆ ಪ್ರವೇಶ ಅನುಮತಿ ಪತ್ರ ನೀಡುವ ಸಲುವಾಗಿ ಚಾಲಕನ /ಲೋಡರ್‌ಗಳ ಪಾಸ್ ಪೋರ್ಟ್ ಅಳತೆಯ ಎರಡು ಭಾವ ಚಿತ್ರಗಳು, ಹೆಸರು, ವಿಳಾಸವನ್ನು ಹೊಂದಿರುವ ಗುರುತಿನ ಚೀಟಿ ಗುತ್ತಿಗೆದಾರರು ನೀಡತಕ್ಕದ್ದು.

**46. ಅಂತಿಮ ಹಣ ಪಾವತಿ ಮುನ್ನ ಇತ್ತೀಚಿನ ವರಮಾನ ತೆರಿಗೆ ಪ್ರಮಾಣ ಪತ್ರ/ವೃತ್ತಿ ತೆರಿಗೆ ಪ್ರಮಾಣ ಪತ್ರ ಒದಗಿಸತಕ್ಕದ್ದು.**

**47. ಗುತ್ತಿಗೆದಾರರು ವೃತ್ತಿ ತೆರಿಗೆ ನೋಂದಣಿ ಮಾಡಿಸಿ ಸರ್ಕಾರವು ನಿಗಧಿಪಡಿಸಿರುವ ವೃತ್ತಿ ತೆರಿಗೆಯನ್ನು ಸರ್ಕಾರಕ್ಕೆ ಪಾವತಿ ಮಾಡಿರಬೇಕು. ತಪ್ಪಿದ್ದಲ್ಲಿ ಸರ್ಕಾರದಿಂದ ನಿಗದಿಪಡಿಸಿರುವ ವೃತ್ತಿ ತೆರಿಗೆಯನ್ನು ಸಾರಿಗೆ ಗುತ್ತಿಗೆದಾರರ ಬಿಲ್ಲಿನಲ್ಲಿ ಕಠಾಯಿಸಿ ಸರ್ಕಾರಕ್ಕೆ ಪಾವತಿಸಲಾಗುವುದು.**

48. ಗುತ್ತಿಗೆದಾರ ನಿಯಮ ನಿಬಂಧನೆಗೆ ಭಂಗ ತಂದಿದ್ದೇ ಆದರೆ, ಗುತ್ತಿಗೆ ರದ್ದಾಗುತ್ತದೆಂದು ಅರಿತವನಾಗಿರಬೇಕು. ನಿಬಂಧನೆ ಭಂಗದಿಂದಾಗಿ ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಉಂಟಾಗಬಹುದಾದ ನಷ್ಟವನ್ನು ಭರಿಸುವ ಮತ್ತು ಶಿವಮೊಗ್ಗ ಹಾಲು ಒಕ್ಕೂಟವು ಆಧಾರ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವುದರ ಬಗ್ಗೆ ಗುತ್ತಿಗೆದಾರ ಅರಿತವನಾಗಿರಬೇಕು.

ಟೆಂಡರ್‌ದಾರರ ಸಹಿ ಮತ್ತು ಹೆಸರು
(ದಪ್ಪ ಅಕ್ಷರಗಳಲ್ಲಿ)

49. ಗುತ್ತಿಗೆದಾರರು ಪ್ರತಿ ತಿಂಗಳು ತಮ್ಮ ಸಾಗಾಣಿಕೆ ಬಿಲ್ಲಿನ ಗುತ್ತಿಗೆ ಹಣ ಪಡೆಯುವ ಸಲುವಾಗಿ ಎಸ್.ಬಿ.ಐ/ಕೆನರಾ ಬ್ಯಾಂಕ್‌ನ ಯಾವುದೇ ಶಾಖೆಯ ಬ್ಯಾಂಕಿನಲ್ಲಿ ಖಾತೆ ಉಳ್ಳವರಾಗಿರಬೇಕು ಹಾಗೂ ಪಾನ್ ಕಾರ್ಡ್ ಹೊಂದಿದ್ದು, ಬಿಲ್‌ನ ಮೇಲೆ ಪಾನ್ ನಂ, ಬ್ಯಾಂಕ್ ಖಾತೆ ಸಂಖ್ಯೆ ನಮೂದಿಸತಕ್ಕದ್ದು.

50. ಈ ಗುತ್ತಿಗೆಯಿಂದ ಎದುರಾಗಬಹುದಾದ ಎಲ್ಲಾ ವಿವಾದಗಳನ್ನು ವ್ಯವಸ್ಥಾಪಕ ನಿರ್ದೇಶಕರು ಶಿವಮೊಗ್ಗ ಹಾಲು ಒಕ್ಕೂಟರವರ ಗಮನಕ್ಕೆ ತರತಕ್ಕದ್ದು ಅವರೇ ಈ ಸಮಸ್ಯೆಯ ಇತ್ಯರ್ಥದ ಬಗ್ಗೆ ಪರಮಾಧಿಕಾರ ಉಳ್ಳವರಾಗಿದ್ದು, ಅವರ ನಿರ್ಧಾರವೇ ಅಂತಿಮವಾದುದೂ ಆಗಿದೆ. ಸಾಗಾಣಿಕೆ ಗುತ್ತಿಗೆಗೆ ಸಂಬಂಧಿಸಿದಂತೆ ಏನಾದರೂ ತಂಟೆ ತಕರಾರು ಬಂದಲ್ಲಿ ಅದನ್ನು ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತಂದು, ಚರ್ಚಿಸಿ ಪರಿಹರಿಸಿಕೊಳ್ಳತಕ್ಕದ್ದು. ವ್ಯವಸ್ಥಾಪಕ ನಿರ್ದೇಶಕರು ತಂಟೆ ತಕರಾರುಗಳನ್ನು ತೀರ್ಮಾನಿಸುವ ಸಂಪೂರ್ಣ ಹಕ್ಕುಳ್ಳವರಾಗಿರುತ್ತಾರೆ. ಈ ಸಂಬಂಧ ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾಗಿರುತ್ತದೆ. ಈ ಒಪ್ಪಂದಕ್ಕೆ ಒಳಪಟ್ಟು ಏನಾದರೂ ವ್ಯಾಜ್ಯಗಳು ಉದ್ಭವಿಸಿದಲ್ಲಿ, ಮಧ್ಯಸ್ಥಿಕೆದಾರರ ಮೂಲಕ ಪರಿಹರಿಸಕೊಳ್ಳತಕ್ಕದ್ದು. ಮಧ್ಯಸ್ಥಿಕೆದಾರರನ್ನು ಶಿವಮೊಗ್ಗ ಸಹಕಾರ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ನೇಮಕ ಮಾಡುವ ಅಧಿಕಾರ ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರು ನೇಮಿಸುವ ಮಧ್ಯಸ್ಥಿಕೆದಾರರನ್ನು ಗುತ್ತಿಗೆದಾರರು ಒಪ್ಪದೇ ಇದ್ದಲ್ಲಿ ಗುತ್ತಿಗೆದಾರರು ಒಕ್ಕೂಟದ ನಾಮ ಮಾತ್ರ ಸದಸ್ಯರಾಗುವುದರಿಂದ ಅಂತಹ ವ್ಯಾಜ್ಯಗಳನ್ನು ಶಿವಮೊಗ್ಗ ವ್ಯಾಪ್ತಿಯ ಸಹಕಾರ ನ್ಯಾಯಾಲಯಗಳಲ್ಲಿ ಮಾತ್ರ ಬಗೆಹರಿಸಿಕೊಳ್ಳತಕ್ಕದ್ದು.

51. ಮೇಲಿನ ನಿಯಮಗಳಿಗೆ ಇತರೆ ನಿಯಮಗಳನ್ನು ಸೇರಿಸುವ ಅಥವಾ ಕಳೆಯುವ ಮತ್ತು ವ್ಯತ್ಯಯಗೊಳಿಸುವ ಅಧಿಕಾರವನ್ನು ಶಿವಮೊಗ್ಗ ಹಾಲು ಒಕ್ಕೂಟವು ಕಾಯ್ದಿರಿಸಿಕೊಂಡಿದೆ.

52. ಯಾವುದೇ ಗುತ್ತಿಗೆದಾರರು ಸಕಾರಣದಿಂದ ಗುತ್ತಿಗೆಯನ್ನು ರದ್ದುಗೊಳಿಸಲು ಇಚ್ಛಿಸಿದಲ್ಲಿ ಸದರಿಯವರು 90ದಿನಗಳ ಮುಂಚಿತವಾಗಿ ಲಿಖಿತ ಮೂಲಕ ಡೇರಿಗೆ ತಿಳಿಸತಕ್ಕದ್ದು, ಶಿವಮೊಗ್ಗ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ಸದರಿ ಮನವಿಯನ್ನು ಪರಿಗಣಿಸಿ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಗುತ್ತಿಗೆಯನ್ನು ರದ್ದುಗೊಳಿಸುವ ಅಧಿಕಾರ ಹೊಂದಿರುತ್ತಾರೆ.

53. ಗುತ್ತಿಗೆದಾರರು ನಿಯಮ ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಗುತ್ತಿಗೆ ರದ್ದು ಮಾಡಲು ಶಿವಮೊಗ್ಗ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ಅಧಿಕಾರ ಉಳ್ಳವರಾಗಿರುತ್ತಾರೆ. ಗುತ್ತಿಗೆ ರದ್ದುಪಡಿಸಿದಲ್ಲಿ ಆಗುವ ನಷ್ಟಕ್ಕೆ ಗುತ್ತಿಗೆದಾರನೇ ಜವಾಬ್ದಾರನಾಗಿದ್ದು ಅದನ್ನು ವಸೂಲಿ ಮಾಡುವ/ ಸರಿಪಡಿಸುವ ಅಧಿಕಾರ ವ್ಯವಸ್ಥಾಪಕ ನಿರ್ದೇಶಕರು, ಶಿವಮೊಗ್ಗ ಹಾಲು ಒಕ್ಕೂಟರವರಿಗೆ ಇರುತ್ತದೆ.

ಟೆಂಡರ್‌ದಾರರ ಸಹಿ ಮತ್ತು ಹೆಸರು
(ದಪ್ಪ ಅಕ್ಷರಗಳಲ್ಲಿ)

ಟೆಂಡರ್‌ದಾರರು ಪಶುಆಹಾರ ಸಾಗಾಣಿಕೆ ಮಾಡಲು ಹೊಂದಿರುವ 2010 ರ ಅಥವಾ ನಂತರದ ಸಾಲಿನ 10/16 ಮೆ.ಟನ್/ಹೆಚ್ಚಿನ ಸಾಮರ್ಥ್ಯದ ಕನಿಷ್ಠ ನಾಲ್ಕು ಸರಕು ಸಾಗಾಣಿಕೆ ವಾಹನ ದಾಖಲಾತಿಗಳ ವಿವರ

**ಟೆಂಡರ್‌ದಾರರ ಹೆಸರು :**

| ಕ್ರ. ಸಂ | ವಾಹನ ಮಾಲೀಕರ ಹೆಸರು | ವಾಹನ ನೊಂದಣಿ ಸಂಖ್ಯೆ | ನೊಂದಣಿ ದಿನಾಂಕ/ಮಾದರಿ | ಎಫ್.ಸಿ ಅವಧಿ | ವಿಮಾ ಅವಧಿ | ಪರಮಿಟ್ ಅವಧಿ | ಟ್ಯಾಕ್ಸ್ ಅವಧಿ | ಎಮಿಷನ್ ಟೆಸ್ಟ್ ಅವಧಿ | ಸಾಮರ್ಥ್ಯ |
|---|---|---|---|---|---|---|---|---|---|
| 1 | | | | | | | | | |
| 2 | | | | | | | | | |
| 3 | | | | | | | | | |
| 4 | | | | | | | | | |

**ಟೆಂಡರ್‌ದಾರರ ಸಹಿ ಮತ್ತು ಹೆಸರು**
(ದಪ್ಪ ಅಕ್ಷರಗಳಲ್ಲಿ)

ಪಶುಆಹಾರ ಸರಕು/ಸಾಗಾಣಿಕೆ ವಾಹನಗಳಿಗೆ ಸಂಬಂಧಿಸಿದ ಮೇಲೆ ನಮೂದಿಸಿರುವ ಮಾಹಿತಿಗಳು ಸತ್ಯಪೂರ್ಣವಾಗಿದ್ದು ವಾಹನದ ದಾಖಲಾತಿಗಳನ್ನು ಇ-ಪೊರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿದ್ದು, ಮೂಲ ದಾಖಲಾತಿಗಳನ್ನು ಪರಿಶೀಲಿಸಲು ಇಚ್ಛಿಸಿದ್ದಲ್ಲಿ ನೀಡಲು ಬದ್ಧನಾಗಿರುತ್ತೇನೆ.

**ಟೆಂಡರ್‌ದಾರರ ಸಹಿ ಮತ್ತು ಹೆಸರು**
(ದಪ್ಪ ಅಕ್ಷರಗಳಲ್ಲಿ)

ವಿ.ಸೂ: **ಅಪ್‌ಲೋಡ್ ಮಾಡಲಾದ ವಾಹನದ ದಾಖಲಾತಿಗಳನ್ನು ಆನ್‌ಲೈನ್ mParivahan app ನಲ್ಲಿ ಪರಿಶೀಲಿಸಲಾಗುವುದು.**

# ಸಾರಿಗೆದಾರರ ಪೂರ್ಣ ಮಾಹಿತಿ

1 ಸಾರಿಗೆದಾರರ/ಟೆಂಡರ್‌ದಾರರ ಹೆಸರು :

2 ವಿಳಾಸ ದೂರವಾಣಿ ಸಂಖ್ಯೆ / ಮೊಬೈಲ್ ಸಂಖ್ಯೆ :

3 ನೀವು ಕಂಪನಿ ಪಾಲುದಾರರಾಗಿದ್ದಲ್ಲಿ ಅದರ ಪೂರ್ಣ ಮಾಹಿತಿ (ಪಾಟ್ರ್ನರ್ ಶಿಪ್ಪ್ ಡೀಡ್ ಲಗತ್ತಿಸತಕ್ಕದ್ದು) :

4. ಸಾರಿಗೆ ಕಾರ್ಯ ಪ್ರಾರಂಭಿಸಿದ ವರ್ಷ ನೀವು ವ್ಯವಹರಿಸುವ ಬ್ಯಾಂಕಿನ ವಿಳಾಸ ಮತ್ತು ಖಾತೆ ಸಂಖ್ಯೆ :

5. ನಿಮ್ಮ ಹೆಸರಿನಲ್ಲಿ ಅಥವಾ ಕಂಪನಿ ಹೆಸರಿನಲ್ಲಿ ಹೊಂದಿರುವ ವಾಹನಗಳ ಸಂಖ್ಯೆ :

6. ಗುತ್ತಿಗೆ ನಿರ್ವಹಿಸಲು ಇಚ್ಛಿಸುವ ಪಶುಆಹಾರ ಸಾಗಾಣಿಕೆ ಮಾರ್ಗದ ಹೆಸರು :

7. ಮಾರ್ಗಕ್ಕೆ ಒದಗಿಸುವ ವಾಹನ ಸಂಖ್ಯೆ ಮತ್ತು ದಾಖಲಾತಿ ಪ್ರತಿಗಳು :

ಆರ್.ಸಿ. ಇನ್ಸೂರೆನ್ಸ್ ತೆರಿಗೆ ಇತ್ಯಾದಿಗಳು

8. ಈ ಕೆಳಗಿನ ಮಾಹಿತಿಗಳಿದ್ದಲ್ಲಿ ಲಗತ್ತಿಸುವುದು :

ಎ) ಆದಾಯ ತೆರಿಗೆ ಪ್ರಮಾಣ ಪತ್ರ

ಬಿ) ಬ್ಯಾಂಕರ್ ಸಾಲ್ವೆನ್ಸಿ ಪ್ರಮಾಣ ಪತ್ರ

1) ವೃತ್ತಿ ತೆರಿಗೆ ನೋಂದಣಿ ಪತ್ರ

**ತಮ್ಮ ವಿಶ್ವಾಸಿ,**

**ಟೆಂಡರ್‌ದಾರರ ಸಹಿ ಮತ್ತು ವಿಳಾಸ**

ಮೇಲ್ಕಂಡ ಮಾಹಿತಿಗಳು ಸತ್ಯಪೂರ್ಣವಾಗಿದ್ದು ಏನಾದರೂ ಬದಲಾವಣೆಗಳು ಆದಲ್ಲಿ ಕೂಡಲೇ ವರದಿ ಮಾಡಲಾಗುವುದು ಹಾಗೂ ಕಾಲಕಾಲಕ್ಕೆ ಆಗುವ ಬದಲಾವಣೆ ಬಗ್ಗೆ ತಿಳಿಸಲಾಗುವುದು.

ಟೆಂಡರ್‌ದಾರರ ಸಹಿ ಮತ್ತು ಹೆಸರು
(ದಪ್ಪ ಅಕ್ಷರಗಳಲ್ಲಿ)

# ಪಟ್ಟಿ ಪರಿಶೀಲನೆ (ಚೆಕ್ ಲೀಸ್ಟ್)

## ಪಶುಆಹಾರ ಸಾಗಾಣಿಕೆಗೆ ಟೆಂಡರ್

| | | | | |
|---|---|---|---|---|
| 01 | ನಿಗದಿತ ಇ.ಎಂ.ಡಿ. ರೂ. 2.00 ಲಕ್ಷ ಇ–ಪೋರ್ಟಲ್ ಮೂಲಕ ಸಲ್ಲಿಸಲಾಗಿದೆಯಾ ? | : | ಹೌದು | ಇಲ್ಲ |
| 02 | ಸಾರಿಗೆದಾರರ ಪೂರ್ಣ ಮಾಹಿತಿ(ಬಯೋಡಾಟಾ)ಸಲ್ಲಿಸಲಾಗಿದೆಯೇ ? | : | ಹೌದು | ಇಲ್ಲ |
| 03 | ಗುತ್ತಿಗೆಗೆ ನೀಡುವ 4 ವಾಹನಗಳ ದಾಖಲಾತಿ ಪ್ರತಿ ಇ–ಪೋರ್ಟಲ್ ಮೂಲಕ ಸಲ್ಲಿಸಲಾಗಿದೆಯೇ? | : | ಹೌದು | ಇಲ್ಲ |
| 04 | ಆದಾಯ ತೆರಿಗೆ ಪ್ರಮಾಣ ಪತ್ರ ಇ–ಪೋರ್ಟಲ್ ಮೂಲಕ ಸಲ್ಲಿಸಲಾಗಿದೆಯೇ ? | : | ಹೌದು | ಇಲ್ಲ |
| 05 | ವೃತ್ತಿ ತೆರಿಗೆ ನೋಂದಣಿ ಪ್ರಮಾಣ ಪತ್ರ ಇ–ಪೋರ್ಟಲ್ ಮೂಲಕ ಸಲ್ಲಿಸಲಾಗಿದೆಯೋ ? | : | ಹೌದು | ಇಲ್ಲ |
| 06 | ಬ್ಯಾಂಕರ್ ಸಾಲ್ವೆನ್ಸ್ ಪ್ರಮಾಣ ಪತ್ರ ಇ–ಪೋರ್ಟಲ್ ಮೂಲಕ ಸಲ್ಲಿಸಲಾಗಿದೆಯೇ ? | : | ಹೌದು | ಇಲ್ಲ |
| **07** | **ತಾಂತ್ರಿಕ ಟೆಂಡರ್ ಪುಟ ಸಂಖ್ಯೆ 1 ರಿಂದ 21 ಕ್ಕೆ ಸೀಲು ಮತ್ತು ಸಹಿ ಹಾಕಿ** ಇ–ಪೋರ್ಟಲ್ ಮೂಲಕ ಸಲ್ಲಿಸಲಾಗಿದೆಯೇ ? | **:** | **ಹೌದು** | **ಇಲ್ಲ** |
| 08 | ನಾಲ್ಕು ವಾಹನಗಳ ದಾಖಲಾತಿಗಳನ್ನು ಇ–ಪೋರ್ಟಲ್ ಮೂಲಕ ಸಲ್ಲಿಸಲಾಗಿದೆಯೇ ? | : | ಹೌದು | ಇಲ್ಲ |
| 09 | ತಾಂತ್ರಿಕ ಮತ್ತು ಘೋಷಣಾ ಪತ್ರಗಳನ್ನು ಇ–ಪೋರ್ಟಲ್ ಮೂಲಕ ಸಲ್ಲಿಸಲಾಗಿದೆಯೇ ? | : | ಹೌದು | ಇಲ್ಲ |

ಟೆಂಡರ್‌ದಾರರ ಸಹಿ ಮತ್ತು ಮೊಹರು

ದಿನಾಂಕ :

# ಘೋಷಣಾ ಪತ್ರ

ದಿನಾಂಕ :

**ವ್ಯವಸ್ಥಾಪಕ ನಿರ್ದೇಶಕರು**
**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ**
**ಜಿಲ್ಲಾ ಸಹಕಾರ ಹಾಲು ಒಕ್ಕೂಟ**
**ಮಾಚೇನಹಳ್ಳಿ ನಿದಿಗೆ ಅಂಚೆ**
**ಶಿವಮೊಗ್ಗ.**

ಮಾನ್ಯರೇ,

ವಿಷಯ ಃ ಟೆಂಡರ್‌ನಲ್ಲಿ ಬಿಡ್ ಮಾಡುವ ಬಗ್ಗೆ.

ಉಲ್ಲೇಖ ಃ ಐ.ಎಫ್.ಟಿ/ಸಂಖ್ಯೆ/ಶಿದಾಚಿಸಹಾಒ/ಶೇಮತಾಂ/ಪ.ಆ/9660/2021–22
**ದಿನಾಂಕ: 29.03.2022**

****

ಮೇಲಿನ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕಹಾಮ ಶಿಕಾರಿಪುರ ಮತ್ತು ಕಹಾಮ ಗುಬ್ಬಿ ಪಶುಆಹಾರ ಕಾರ್ಖಾನೆಯಿಂದ ಪಶುಆಹಾರ ಸಾಗಾಣಿಕೆ ವಾರ್ಷಿಕ ಗುತ್ತಿಗೆಗೆ ಸಂಬಂಧಿಸಿದ ಬಿಡ್ ನಿಯಮಾವಳಿಗಳ ಮಾಹಿತಿಗಳನ್ನು ತಿಳಿದು ಹಾಗೂ ಅನುಬಂಧ **'ಎ''ಬಿ' 'ಸಿ' ಮತ್ತು 'ಡಿ'** ನಲ್ಲಿರುವ ಷರತ್ತು ಮತ್ತು ನಿಬಂಧನೆಗಳನ್ನು ಓದಿ, ಅರ್ಥ ಮಾಡಿಕೊಂಡಿದ್ದು ಒಪ್ಪಿ ಟೆಂಡರ್‌ನಲ್ಲಿ ಭಾಗವಹಿಸುತ್ತಿದ್ದೇನೆ. ಟೆಂಡರ್‌ಗೆ ಮೂಲತಃ ಅವಶ್ಯಕತೆ ಇರುವ ಇ.ಎಂ.ಡಿ. (ಬಿಡ್ಡು ಠೇವಣಿ) ಯನ್ನು ಇ–ಪ್ರೋಕ್ಯೂರ್‌ಮೆಂಟ್ ನಿಯಮಾವಳಿಯಂತೆ ಸಲ್ಲಿಸಿದೆ. ಪಶುಆಹಾರ ಸಾಗಾಣಿಕೆ ಟೆಂಡರ್‌ಗೆ ಸಂಬಂಧಿಸಿದಂತೆ ಹಾಗೂ ಟೆಂಡರ್‌ನಲ್ಲಿ ಪ್ರಕಟಿಸಿದಂತೆ ಕನಿಷ್ಠ ಸುಸ್ಥಿತಿಯುಳ್ಳ 4 ಸರಕು ಸಾಗಾಣಿಕೆ ವಾಹನಗಳ ದಾಖಲಾತಿ ಪ್ರತಿಗಳನ್ನು ಸಹ ಇ–ಪೋರ್ಟಲ್ ಮೂಲಕ ಅಪ್‌ಲೋಡ್ ಮಾಡಿರುತ್ತೇನೆ.

ಇ.ಎಂ.ಡಿ. ಮೊತ್ತ ರೂ. ........................................ (ರೂಪಾಯಿ ........................................ಗಳು ಮಾತ್ರ) ಇ–ಪೋರ್ಟಲ್ ಮೂಲಕ ಅಪ್‌ಲೋಡ್ ಮಾಡಿರುತ್ತೇನೆ.

ವಂದನೆಗಳೊಂದಿಗೆ,

ಟೆಂಡರ್‌ದಾರರ ಸಹಿ,

ವಿಳಾಸ

ಮೊಬೈಲ್ ನಂ:

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ
ಮಾಚೇನಹಳ್ಳಿ ನಿದಿಗೆ ಅಂಚೆ ಶಿವಮೊಗ್ಗ – 577 222. ದೂರವಾಣಿ : 246161, 246165.
ದೂರವಾಣಿ ಸಂಖ್ಯೆ:08182-246165 E-Mail:shimulpandi@gmail.com Fax:08182-246284.

# ವಾಣಿಜ್ಯ ಟೆಂಡರ್ ಭಾಗ –2

**ಟೆಂಡರ್‌ದಾರರು ತಾಂತ್ರಿಕ ಟೆಂಡರ್ ಮತ್ತು ವಾಣಿಜ್ಯ ಟೆಂಡರ್ ದಾಖಲಾತಿಗಳನ್ನು ಇ.ಎಂ.ಡಿ. ಮೊತ್ತದೊಂದಿಗೆ ನಿಗದಿತ ಶುಲ್ಕ ಪಾವತಿಸಿ ಕರ್ನಾಟಕ ಸರ್ಕಾರದ ಇ–ಪೋರ್ಟಲ್ ಮುಖಾಂತರವೇ ಅಪ್‌ಲೋಡ್ ಮಾಡತಕ್ಕದ್ದು.**

**ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ**
**ಮಾಚೇನಹಳ್ಳಿ ನಿದಿಗೆ ಅಂಚೆ ಶಿವಮೊಗ್ಗ – 577 222. ದೂರವಾಣಿ : (08182) 246161, 246165**

# ವಾಣಿಜ್ಯ ಟೆಂಡರ್

## ವಾರ್ಷಿಕ ದರ ಗುತ್ತಿಗೆ

2010 ರ ಅಥವಾ ನಂತರದ ಸಾಲಿನ ಟಾರ್ಪಲ್ ಮುಚ್ಚಿದ ಬಾಡಿ ಅಳವಡಿಸಿದ ಸರಕು ಸಾಗಾಣಿಕೆ ವಾಹನಗಳಿಂದ ಪಶುಆಹಾರ, ಮಿನರಲ್ ಮಿಕ್ಚರ್ ಮತ್ತು ಕರುಗಳ ಪಶುಆಹಾರ ಸಾಗಾಣಿಕೆ ಮಾಡಲು, 10/16 ಟನ್ ಮತ್ತು ಅದಕ್ಕಿಂತ ಹೆಚ್ಚಿನ ಸಾಮರ್ಥ್ಯದ ಸರಕು ಸಾಗಾಣಿಕೆ ವಾಹನಗಳನ್ನು ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದಲ್ಲಿ ಒದಗಿಸಲು ವಾಣಿಜ್ಯ ಟೆಂಡರ್.

## ವಾಣಿಜ್ಯ ಟೆಂಡರ್ ಭಾಗ—2

| | | |
|---|---|---|
| 1 | **ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ** | **01.04.2022ರಿಂದ** |
| 2 | ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ | **18.04.2022ರಂದು ಸಂಜೆ: 17.30 ಗಂಟೆಯವರೆಗೆ** |
| 3 | **ಟೆಕ್ನಿಕಲ್ ಟೆಂಡರ್ ತೆರೆಯುವ ದಿನ** | **20.04.2022** ರಂದು ಬೆಳಿಗ್ಗೆ: **11.30** ಗಂಟೆಗೆ |
| 4 | **ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ ದಿನ** | **25.04.2022** ರಂದು ಬೆಳಿಗ್ಗೆ: **11.30** ಗಂಟೆಗೆ |

ಟೆಂಡರ್‌ದಾರರ ಸಹಿ ಮತ್ತು ಹೆಸರು
(ದಪ್ಪ ಅಕ್ಷರಗಳಲ್ಲಿ)

# ವಾಣಿಜ್ಯ ಟೆಂಡರ್ ಭಾಗ – 2/ಘೋಷಣಾ ಪತ್ರ

## ಅರ್ಹತೆ

ತಾಂತ್ರಿಕ ಟೆಂಡರ್‌ನ ಭಾಗ -1 ರಲ್ಲಿನ ನಿಯಮಾವಳಿಗಳ ಷರತ್ತು ಮತ್ತು ನಿಬಂಧನೆಗಳನ್ನು ಸಂಪೂರ್ಣವಾಗಿ ಯಾರು ಪೂರೈಸುತ್ತಾರೋ ಅಂತಹ ಬಿಡ್ಡುದಾರರ ವಾಣಿಜ್ಯ ಟೆಂಡರ್‌ನ್ನು ಅಂಗೀಕರಿಸಿ ಅಂತಿಮವಾಗಿ ಟೆಂಡರ್ ಇತ್ಯರ್ಥ ಮಾಡಲಾಗುವುದು. ಅರ್ಹತೆ ಪಡೆಯದ ಇತರೆ ವಾಣಿಜ್ಯ ಟೆಂಡರ್‌ಗಳನ್ನು ಸಾರಾಸಗಟಾಗಿ ತಿರಸ್ಕರಿಸಲಾಗುವುದು.

ಸದರಿ ನಿಯಮಗಳ ಷರತ್ತು ಮತ್ತು ನಿಬಂಧನೆಗಳಿಗೆ ನಾನು ಬದ್ಧನಾಗಿರುತ್ತೇನೆ.

ಟೆಂಡರ್‌ದಾರರ ಸಹಿ<br>
ಹೆಸರು<br>
ಮತ್ತು ಮೊಹರು

ವಿಳಾಸ :

ಹೆಸರು : ............................................................

ತಂದೆಯ ಹೆಸರು : ..............................................

ವಿಳಾಸ :..............................................................

...........................................................................

..................................ಪಿನ್ ಕೋಡ್...................

ದೂರವಾಣಿ ಸಂ: ...............................................

# ದರಪಟ್ಟಿ

**ದಿನಾಂಕ :**

**ವ್ಯವಸ್ಥಾಪಕ ನಿರ್ದೇಶಕರು**
**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ**
**ಜಿಲ್ಲಾ ಸಹಕಾರ ಹಾಲು ಒಕ್ಕೂಟ**
**ಮಾಚೇನಹಳ್ಳಿ ನಿದಿಗೆ ಅಂಚೆ**
**ಶಿವಮೊಗ್ಗ.**
ಮಾನ್ಯರೇ,

**ಉಲ್ಲೇಖ :** ಸಾಗಾಣಿಕೆ ಕಾಮಗಾರಿಗೆ ದರಪಟ್ಟಿ ಸಲ್ಲಿಕೆ ಪ್ರಕಟಣೆ ಸಂಖ್ಯೆ:
ಐ.ಎಫ್.ಟಿ/ಸಂಖ್ಯೆ/ಶಿದಾಚಿಸಹಾಒ/ಶೇಮತಾಂ/ಪ.ಆ/9660/2021-22
**ದಿನಾಂಕ: 29.03.2022**

ಮೇಲಿನ ಉಲ್ಲೇಖದನ್ವಯ ನಾನು / ನಾವು ಕಹಾಮದ ಪಶುಆಹಾರ ಮಿಶ್ರಣ ಕಾರ್ಖಾನೆ ಶಿಕಾರಿಪುರ/ಗುಬ್ಬಿ ಇಲ್ಲಿಂದ ಶಿವಮೊಗ್ಗ ಹಾಲು ಒಕ್ಕೂಟದ ವ್ಯಾಪ್ತಿಯ ಚಿತ್ರದುರ್ಗ ಜಿಲ್ಲೆಯ ಸಂಘಗಳು ಹಾಗೂ ಡೇರಿ/ಶೀತಲೀಕರಣ ಕೇಂದ್ರಗಳಿಗೆ ಪಶುಆಹಾರ ಮತ್ತು ಪಶು ಉತ್ಪನ್ನಗಳನ್ನು ಸಾಗಾಣಿಕೆ ಮಾಡಲು ಈ ಕೆಳಗೆ ನಮೂದಿಸಿರುವ ಮಾರ್ಗಗಳಲ್ಲಿ ಸಾಗಾಣಿಕೆಗೆ ವಾಹನ ಒದಗಿಸಲು ನನ್ನ /ನಮ್ಮ ದರಪಟ್ಟಿ ಸಲ್ಲಿಸಿರುತ್ತೇನೆ/ತ್ತೇವೆ.

| ಕ್ರ.ಸಂ | ಪಶುಆಹಾರ ಸಾಗಾಣಿಕೆ ಮಾರ್ಗದ ಹೆಸರು | ಪ್ರತಿ ಟನ್ ಸಾಗಾಣಿಕೆಗೆ ನಮೂದಿಸಿದ ದರ ರೂ. |
|---|---|---|
| 1 | ಚಿತ್ರದುರ್ಗ ವಿಭಾಗ (ಚಿತ್ರದುರ್ಗ, ಚಳ್ಳಕೆರೆ, ಹೊಳಲ್ಕೆರೆ ಹಿರಿಯೂರು, ಹೊಸದುರ್ಗ, ಮತ್ತು ಮೊಳಕಾಲ್ಮೂರು ತಾಲ್ಲೂಕು) | |

ನಾನು/ನಾವು ಮತ್ತೊಮ್ಮೆ ದೃಢೀಕರಿಸಿರುವಂತೆ ನಾನು/ನಾವು ಪಶುಆಹಾರ ಸಾಗಾಣಿಕೆಯ ವಿವರಗಳನ್ನು ಅಭ್ಯಸಿಸಿರುತ್ತೇವೆ. ಹಾಗೂ ಪಶುಆಹಾರ ಸಾಗಾಣಿಕೆ ನಿಯಮ ನಿಬಂಧನೆಗಳನ್ನು, ವಿವರ ಮಾಹಿತಿಗಳನ್ನು ಮಾರ್ಗಸೂಚಿಗಳನ್ನು ಹಾಗೂ ಇತರೆ ಅಗತ್ಯ ವಿಷಯಗಳನ್ನು ಅರ್ಥ ಮಾಡಿಕೊಂಡಿರುತ್ತೇನೆ/ತ್ತೇವೆ. ನಾನು/ನಾವು ಪಶುಆಹಾರ ಸಾಗಾಣಿಕೆಯ ರೀತಿ ನೀತಿಗಳನ್ನು ಸಂಪೂರ್ಣ ಅರಿತವನಾಗಿರುತ್ತೇನೆ. ಹಾಗೂ ಇದಕ್ಕೆ ಅನುಗುಣವಾಗಿಯೇ ದರಪಟ್ಟಿಯನ್ನು ಸಲ್ಲಿಸಿರುತ್ತೇನೆ. ಮೇಲೆ ನಮೂದಿಸಿರುವ ಸಾಗಾಣಿಕೆ ದರಗಳು ಪಶುಆಹಾರವನ್ನು ಲಾರಿಗೆ ಏರಿಸುವ/ಇಳಿಸುವ ವೆಚ್ಚ, ರಾಜ್ಯ/ರಾಷ್ಟ್ರೀಯ ಹೆದ್ದಾರಿ ಶುಲ್ಕಗಳು ಮತ್ತು ಜಿ.ಎಸ್.ಟಿ ತೆರಿಗೆಗಳನ್ನು ಒಳಗೊಂಡಿರುತ್ತದೆ.

ಗುತ್ತಿಗೆಗೆ ಸಂಬಂಧಪಟ್ಟಂತೆ ನಿಯಮ ನಿಬಂಧನೆಗಳನ್ನು ಕುರಿತಾಗಿ ಉಂಟಾಗಬಹುದಾದ ಯಾವುದೇ ತಂಟೆ/ತಕರಾರಿಗೆ ಶಿವಮೊಗ್ಗ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ನೀಡುವ ತೀರ್ಮಾನವೇ ಅಂತಿಮ ಎನ್ನುವ ವಿಷಯಕ್ಕೆ ನಾನು/ನಾವು ಬದ್ಧರಾಗಿರುತ್ತೇನೆ/ತ್ತೇವೆ.

ಟೆಂಡರ್‌ದಾರರ ಸಹಿ/ಸೀಲು
ಹೆಸರು

**ಶಿವಮೊಗ್ಗ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ**

**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ– 577 222,☎08182–246161, 246165 www.Shimul.coop**

ಐ.ಎಫ್.ಟಿ/ಸಂಖ್ಯೆ/ಶಿಸಹಾಒ/ಶೇಮತಾಂ/ಟೆಂಡರ್/ 9660/ 2021–22 **ದಿನಾಂಕ: 29.03.2022**

**–: *ಪಶು ಆಹಾರ ಸಾಗಾಣಿಕೆಗೆ ವಾಹನ ಒದಗಿಸಲು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ :–***

ಶಿವಮೊಗ್ಗ ಹಾಲು ಒಕ್ಕೂಟದ ವ್ಯಾಪ್ತಿಯ ಚಿತ್ರದುರ್ಗ ಜಿಲ್ಲೆಯ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ/ಡೈರಿ ಹಾಗೂ ಶೀತಲೀಕರಣ ಕೇಂದ್ರದ ಉಗ್ರಾಣಗಳಿಗೆ ***ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕು ಅಥವಾ ಗುಬ್ಬಿ, ಗುಬ್ಬಿ ತಾಲ್ಲೂಕು ತುಮಕೂರು ಜಿಲ್ಲೆ ಕಹಾಮ ಪಶುಆಹಾರ ಕಾರ್ಖಾನೆ*** ಇಲ್ಲಿಂದ ಮಾಸಿಕ ಅಂದಾಜು 500 ಟನ್ ಪಶು ಆಹಾರವನ್ನು ಸಾಗಾಣಿಕೆ ಮಾಡಲು 10–16 ಟನ್/ಅದಕ್ಕಿಂತ ಹೆಚ್ಚಿನ ಸಾಮರ್ಥ್ಯದ ಸರಕು ಸಾಗಾಣಿಕೆ ವಾಹನಗಳನ್ನು ಹೊಂದಿರುವ ವಾಹನ ಮಾಲೀಕರಿಂದ **ಒಂದು ವರ್ಷದ ಅವಧಿಗೆ** ಬಾಡಿಗೆ/ಗುತ್ತಿಗೆ ಆಧಾರದ ಮೇಲೆ ವಾಹನ ಪಡೆಯಲು ಟೆಕ್ನಿಕಲ್/ಕಮರ್ಷಿಯಲ್(ದರ) ಹೊಂದಿದ ಪ್ರತ್ಯೇಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ದಾರರು ಟೆಂಡರ್ ದಾಖಲಾತಿಗಳನ್ನು ನಿಬಂಧನೆಗಳನ್ನು ಸಹಿತ ನಿಗದಿತ ಶುಲ್ಕ ಪಾವತಿಸಿ ಜಿ.ಒ.ಕೆ. ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಸಲ್ಲಿಸುವುದು.

**ವಿಳಾಸ : https://eproc.karnataka.gov.in**

| | | |
|---|---|---|
| 1 | **ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ** | **01.04.2022ರಿಂದ** |
| 2 | ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ | **18.04.2022ರಂದು ಸಂಜೆ: 17.30 ಗಂಟೆಯವರೆಗೆ** |
| 3 | **ಟೆಕ್ನಿಕಲ್ ಟೆಂಡರ್ ತೆರೆಯುವ ದಿನ** | **20.04.2022** ರಂದು ಬೆಳಿಗ್ಗೆ: **11.30** ಗಂಟೆಗೆ |
| 4 | **ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ ದಿನ** | **25.04.2022** ರಂದು ಬೆಳಿಗ್ಗೆ: **11.30** ಗಂಟೆಗೆ |

**ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಚಿತ್ರದುರ್ಗ ಜಿಲ್ಲೆ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ/ ಡೈರಿ ಹಾಗೂ ಶೀತಲೀಕರಣ ಕೇಂದ್ರದ ಉಗ್ರಾಣಗಳಿಗೆ *ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕು ಅಥವಾ ಗುಬ್ಬಿ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ ಕಹಾಮ ಪಶುಆಹಾರ ಕಾರ್ಖಾನೆ* ಪಶುಆಹಾರ ಘಟಕದಿಂದ ಪಶುಆಹಾರ ಸಾಗಾಣಿಕೆ ಮಾಡಲು 2010 ರ ಅಥವಾ ನಂತರದ ಮಾದರಿಯ ಸುಸ್ಥಿತಿಯಲ್ಲಿರುವ 10 ಮತ್ತು 16 ಮೆ.ಟನ್/ಅದಕ್ಕಿಂತ ಹೆಚ್ಚಿನ ಸಾಮರ್ಥ್ಯದ ಕನಿಷ್ಠ 4 ಸರಕು ಸಾಗಾಣಿಕೆ ವಾಹನಗಳನ್ನು ಹೊಂದಿರುವ ವಾಹನ ಮಾಲೀಕರು ಟೆಂಡರ್ ಸಲ್ಲಿಸಬಹುದು. ಗುತ್ತಿಗೆ ಅವಧಿ 1 ವರ್ಷ, ಲೋಡಿಂಗ್ /ಅನ್ ಲೋಡಿಂಗ್ ಮತ್ತು ರಾಜ್ಯ / ರಾಷ್ಟ್ರೀಯ ಹೆದ್ದಾರಿ ಶುಲ್ಕ/ಟಿ.ಡಿ.ಎಸ್ ಮತ್ತು ಜಿ.ಎಸ್.ಟಿ. ಎಲ್ಲಾ ಸೇರಿ ಟನ್ ಒಂದಕ್ಕೆ ದರ ನಮೂದಿಸುವುದು.**

| ಕ್ರ.ಸಂ | ಮಾರ್ಗದ ಹೆಸರು | **ಮಾಸಿಕ ಅಂದಾಜು ಪಶುಆಹಾರ ಸಾಗಾಣಿಕೆ ಟನ್‌ಗಳಲ್ಲಿ** | **ಟ್ರಿಪ್‌ಗೆ ಅಂದಾಜು ಅಂತರ** | **ಇ.ಎಂ.ಡಿ ₹** | **ಭದ್ರತಾ ಠೇವಣಿ ₹** |
|---|---|---|---|---|---|
| 1 | ಚಿತ್ರದುರ್ಗ ವಿಭಾಗ (ಚಿತ್ರದುರ್ಗ, ಚಳ್ಳಕೆರೆ, ಹೊಳಲ್ಕೆರೆ ಹಿರಿಯೂರು, ಹೊಸದುರ್ಗ, ಮತ್ತು ಮೊಳಕಾಲ್ಮೂರು ತಾಲ್ಲೂಕು) | 500 | 300 ಕಿ.ಮೀ | 2,00,000/– | 2,50,000/– |

**ಮುಂದುವರೆದಿದೆ....**

## ನಿಬಂಧನೆ ಮತ್ತು ಷರತ್ತುಗಳು

1. 10/16 ಟನ್/ ಹೆಚ್ಚಿನ ಸಾಮರ್ಥ್ಯದ ಸುಸ್ಥಿತಿಯಲ್ಲಿರುವ ಕನಿಷ್ಠ 4 ಸರಕು ಸಾಗಾಣಿಕೆ ಸಾರಿಗೆ ವಾಹನಗಳನ್ನು ಕಡ್ಡಾಯವಾಗಿ ಹೊಂದಿರುವ ವಾಹನ ಮಾಲೀಕರು ಟೆಂಡರ್ ಸಲ್ಲಿಸಬಹುದಾಗಿದೆ. ಮತ್ತು ಇ–ಪ್ರೋಕ್ಯೂರ್‌ಮೆಂಟ್ ನಿಯಮಾವಳಿ ಅಡಿ ನೊಂದಣಿ ಮಾಡಿಸದ ಗುತ್ತಿಗೆದಾರರು ನೊಂದಣಿ ಮಾಡಿಸಿ ಟೆಂಡರ್ ಅರ್ಜಿ ಸಲ್ಲಿಸಬಹುದು.
2. ಟೆಂಡರ್ ಸಲ್ಲಿಸ ಬಯಸುವವರು ತಮ್ಮ ಹೆಸರಿಗೆ ಕಡ್ಡಾಯವಾಗಿ 10/16 ಟನ್ ಸಾಮರ್ಥ್ಯದ ಅಥವಾ ಅದಕ್ಕಿಂತ ಹೆಚ್ಚಿನ ಸಾಮರ್ಥ್ಯದ ಸುಸ್ಥಿತಿಯಲ್ಲಿರುವ ಕನಿಷ್ಠ 4 ಸರಕು ಸಾಗಾಣಿಕೆ ವಾಹನಗಳನ್ನು ಹೊಂದಿರತಕ್ಕದ್ದು. ವಾಹನಗಳ ದಾಖಲಾತಿಗಳನ್ನು ಅಪ್‌ಲೋಡ್ ಮಾಡತಕ್ಕದ್ದು.
3. ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯ ಸಂಘಗಳ ಬೇಡಿಕೆ, ಶಿಕಾರಿಪುರ/ಗುಬ್ಬಿ ಪಶುಆಹಾರ ಕಾರ್ಖಾನೆಯಲ್ಲಿನ ಉತ್ಪಾದನೆ ಮತ್ತು ಒಕ್ಕೂಟಕ್ಕೆ ಹಂಚಿಕೆಯಾಗುವ ಪಶುಆಹಾರದ ಪರಿಮಾಣದ ಮೇಲೆ ಅಂದಾಜನ್ನು ನಮೂದಿಸಿದ್ದು, ಪಶುಆಹಾರ ಸಾಗಾಣಿಕೆ ಪರಿಮಾಣವು ಟೆಂಡರ್‌ನಲ್ಲಿ ನಮೂದಿಸಿದ್ದಕ್ಕಿಂತ ಹೆಚ್ಚು/ಕಡಿಮೆ ಆಗಬಹುದಾಗಿದೆ.
4. ಪಶು ಆಹಾರ ಸಾಗಾಣಿಕೆಗೆ ಟೆಂಡರ್‌ನಲ್ಲಿ ಸಮ ದರ ನಮೂದಿಸಿರುವುದು ಕಂಡುಬಂದಲ್ಲಿ ಆಸಕ್ತ ಟೆಂಡರ್‌ದಾರರೊಂದಿಗೆ ಪುನಃ ದರ ಸಂಧಾನ ಮಾಡಿ, ದರ ಸಂಧಾನದಲ್ಲಿ ಕಡಿಮೆ ದರ ನಮೂದಿಸುವ ಟೆಂಡರ್‌ದಾರರಿಗೆ ಮಾತ್ರ ಪಶುಆಹಾರ ಸಾಗಾಣಿಕೆ ಟೆಂಡರ್ ನೀಡಲಾಗುವುದು.
5. ಇ.ಎಂ.ಡಿ. ರೂ. 2,00,000/- ಇ.ಎಂ.ಡಿಯನ್ನು ಇ–ಪ್ರೋಕ್ಯೂರ್‌ಮೆಂಟ್ ವೇದಿಕೆಯ ನಿಯಾಮವಳಿಯಂತೆ ಸಲ್ಲಿಸುವುದು. ಟೆಂಡರ್‌ದರ ಒಪ್ಪಿಗೆಯಾಗಿ ಕೆಲಸದ ಕಾರ್ಯಾದೇಶ ನೀಡುವ ಮುನ್ನ ಭದ್ರತಾ ಠೇವಣಿಯನ್ನು ಬ್ಯಾಂಕ್ ಎಫ್.ಡಿ ಮೂಲಕ ಕಚೇರಿಗೆ ಸಲ್ಲಿಸಬೇಕಾಗಿರುತ್ತದೆ.
6. ಶಿಕಾರಿಪುರ/ಗುಬ್ಬಿ ಕಹಾಮ ಪಶುಆಹಾರ ಕಾರ್ಖಾನೆಯಿಂದ ಚಿತ್ರದುರ್ಗ ಜಿಲ್ಲೆಗೆ ಪಶುಆಹಾರ ಸಾಗಾಣಿಕೆ ಮಾಡಲು ಟೆಂಡರ್ ಸಲ್ಲಿಸಬಯಸುವವರು ರಾಷ್ಟ್ರೀಯ/ರಾಜ್ಯ ಹೆದ್ದಾರಿ ಶುಲ್ಕಗಳನ್ನು ಗಮನದಲ್ಲಿಟ್ಟುಕೊಂಡು ದರ ನಮೂದಿಸುವುದು.
7. ಸಂಘ/ಶೀಥಲೀಕರಣ ಕೇಂದ್ರಗಳಿಂದ ಪಶುಆಹಾರ ಘಟಕಕ್ಕೆ/ಪಶು ಆಹಾರ ಘಟಕದಿಂದ ಸಂಘ/ ಶೀಥಲೀಕರಣ ಕೇಂದ್ರಗಳಿಗೆ ಬದಲಾಯಿಸಬೇಕಾದ ಪಶುಆಹಾರವನ್ನು ಎತ್ತುವಳಿ ಮಾಡಿ ಸಾಗಾಣಿಕೆ ಮಾಡಲು ಬದ್ಧರಾಗಿರಬೇಕು.
8. ಟೆಂಡರ್ ಪ್ರಕಟಣೆಯಲ್ಲಿ ಮಾಸಿಕ 500 ಮೆ.ಟನ್ ಪಶುಆಹಾರವನ್ನು ಎತ್ತುವಳಿ ಮಾಡಿ ಸಾಗಾಣಿಕೆ ಮಾಡಲು ಪ್ರಕಟಿಸಲಾಗಿರುತ್ತದೆ. ಪಶುಆಹಾರ ಕಾರ್ಖಾನೆಯಲ್ಲಿ ದಿನನಿತ್ಯ ಉತ್ಪಾದನೆಯಾಗುವ ಪಶುಆಹಾರದ ಪರಿಮಾಣದ ಮೇಲೆ ಪಶುಆಹಾರ ಸಾಗಾಣಿಕೆಯು ಅವಲಂಭಿತವಾಗಿದ್ದು, ತಾಂತ್ರಿಕ ಕಾರಣಗಳಿಂದ ಪಶುಆಹಾರ ಉತ್ಪಾದನೆಯು ಕುಂಠಿತಗೊಂಡಲ್ಲಿ ಸಾಗಾಣಿಕೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದಾಗಿದ್ದು, ಇದಕ್ಕೆ ಒಕ್ಕೂಟವು ಜವಾಬ್ದಾರಿಯಾಗಿರುವುದಿಲ್ಲ.
9. ಪಶು ಆಹಾರ ಸಾಗಾಣಿಕೆ ಗುತ್ತಿಗೆದಾರರು, ಪಶುಆಹಾರ ಕಾರ್ಖಾನೆಯಿಂದ ಪಶುಆಹಾರ ಪಡೆದು ಒಕ್ಕೂಟದಿಂದ ನೀಡಿದ ಸಂಘಗಳ ಬೇಡಿಕೆ ಮತ್ತು ವೇಳಾಪಟ್ಟಿಯಂತೆ ಸಂಬಂಧಿಸಿದ ಸಂಘಗಳಿಗೆ ಪಶುಆಹಾರ ವಿತರಿಸತಕ್ಕದ್ದು, ಪಶುಆಹಾರವನ್ನು ಲಾರಿಗಳಿಗೆ ಏರಿಸುವ ಮತ್ತು ಸಂಘಗಳಲ್ಲಿ ಇಳಿಸುವ ವೆಚ್ಚ ಮತ್ತು ರಾಷ್ಟ್ರೀಯ/ರಾಜ್ಯ ಹೆದ್ದಾರಿ ಶುಲ್ಕಗಳನ್ನು ಒಕ್ಕೂಟದ ವತಿಯಿಂದ ನೀಡಲಾಗುವುದಿಲ್ಲ ಹಾಗೂ TDS ಆದಾಯ ತೆರಿಗೆ, ಜಿ.ಎಸ್.ಟಿ. ಮತ್ತು ಅನ್ವಯಿಸುವ ಇತರೆ ತೆರಿಗಳನ್ನು ಗುತ್ತಿಗೆದಾರರ ಪಶುಆಹಾರ ಸಾಗಾಣಿಕೆ ಬಿಲ್ಲಿನಲ್ಲಿ ನಿಯಮಾವಳಿಯಂತೆ ಕಠಾಯಿಸಲಾಗುವುದು. (ಅನ್ವಯಿಸುವ ಜಿ.ಎಸ್.ಟಿ.ಯನ್ನು **Reverse Charging Method** ನಲ್ಲಿ ಕಠಾಯಿಸಲಾಗುವುದು.)

ಯಾವುದೇ ಕಾರಣ ನೀಡದೆ ಟೆಂಡರನ್ನು ಅಂಗೀಕರಿಸುವ /ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೆ ಅಂತಿಮವಾದುದು.

ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಶೇಮತಾಂ ವಿಭಾಗವನ್ನು ಸಂಪರ್ಕಿಸಬಹುದು.www.shimul.coop

ಸಹಿ/-

**ದಿನಾಂಕ: 29.03.2022**
ಸ್ಥಳ: ಶಿವಮೊಗ್ಗ

**ವ್ಯವಸ್ಥಾಪಕ ನಿರ್ದೇಶಕರು**
ಶಿವಮೊಗ್ಗ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ
ಸಹಕಾರ ಹಾಲು ಒಕ್ಕೂಟ